# ಕನ್ನಡ

# ಬಾಲಭಾರತಿ

## ಎರಡನೆಯ ಇಯತ್ತೆ



Tele MANAS
National Tele Mental Health Programme
14416

# ಟೆಲಿ ಮಾನಸ ಸಹಾಯವಾಣಿ.

**Tele-MANAS (Tele Mental Health Assistance and Networking Across States)**

**(14416/1800-89-14416)**

ರಾಷ್ಟ್ರೀಯ ಮಾನಸಿಕ ಆರೋಗ್ಯದ ಕಾರ್ಯಕ್ರಮದಡಿಯ ಕೇಂದ್ರ ಪುರಸ್ಕೃತ ಟೆಲಿಮಾನಸ ಈ ಯೋಜನೆಯನ್ನು ಅಕ್ಟೋಬರ 2022ರಿಂದ ಮಹಾರಾಷ್ಟ್ರ ರಾಜ್ಯದಲ್ಲಿ ಜಾರಿಗೆ ತರಲಾಗಿದೆ. ಟೆಲಿಮಾನಸ ಕಾರ್ಯಕ್ರಮದಡಿಯಲ್ಲಿ 24×7 ಉಚಿತ, ಏಕಾತ್ಮಕ ಮತ್ತು ಸಮಗ್ರ ಮಾನಸಿಕ ಸೇವೆಯನ್ನು 14416 ಈ ಸಹಾಯವಾಣಿ ಮೂಲಕ ನೀಡಲಾಗುತ್ತದೆ. ಇದರಲ್ಲಿ ವಿವಿಧ ಮಾನಸಿಕ ಸಮಸ್ಯೆಗಳಿಗಾಗಿ ತಜ್ಞರ ಮೂಲಕ ಚಿಕಿತ್ಸೆ ಹಾಗೂ ಸಮಾಲೋಚನೆ ನೀಡಲಾಗುತ್ತದೆ. ಟೆಲಿಮಾನಸ ಸಹಾಯವಾಣಿ ಕರೆ ಮಾಡಿದ ನಂತರ ತಾವು ನೀಡುವ ಮಾಹಿತಿಯನ್ನು ಸಂಪೂರ್ಣವಾಗಿ ಗೌಪ್ಯವಾಗಿಡಲಾಗುವುದು. ಆದ್ದರಿಂದ ವಿದ್ಯಾರ್ಥಿಗಳು ಯಾವುದೇ ರೀತಿಯ ಸಂಕೋಚವಿಲ್ಲದೇ ತಮ್ಮ ಸಮಸ್ಯೆಗಳನ್ನು ಈ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿ ಹೇಳಬೇಕು ಮತ್ತು ಮನಸ್ಸಿನಲ್ಲಿರುವ ಅನುಮಾನಗಳನ್ನು ಕೇಳಿ ತಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಪಡೆದು ಮತ್ತು ಇತರರಿಗೂ ಸಹಾಯ ಪಡೆಯಲು ತಿಳಿಸಬೇಕು.

## ಮನೋದರ್ಪಣ

ಮನೋದರ್ಪಣ (8448440632) ಇದು ಉಚಿತ ದೂರವಾಣಿ ಸೇವೆಯಾಗಿದ್ದು, ಜುಲೈ 2020ರಿಂದ ಶಿಕ್ಷಣ ಮಂತ್ರಿಮಂಡಳದ ಮೂಲಕ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಹಾಗೂ ತರಬೇತಿ ಪರಿಷತ್ತಿನಲ್ಲಿ ಮನೋದರ್ಪಣ ಕಕ್ಷೆಯ ಮೂಲಕ ವಿದ್ಯಾರ್ಥಿಗಳಿಗೆ ಪಾಲಕರಿಗೆ ಅದರಂತೆಯೇ ಶಿಕ್ಷಕರಿಗೆ ಮನೋವಿಜ್ಞಾನದ ಮಾರ್ಗದರ್ಶನ ಹಾಗೂ ಸಹಾಯವನ್ನು ಪಡೆಯುವುದಾಕ್ಕಾಗಿ ಬೆಳಿಗ್ಗೆ 8 ರಿಂದ ಸಾಯಂಕಾಲ 8.00 ಈ ಕಾಲಾವಧಿಯಲ್ಲಿ ವಾರದಲ್ಲಿರುವ ಎಲ್ಲಾ ದಿವಸ ಉಪಲಬ್ಧ ಮಾಡಿಕೊಡಲಾಗಿದೆ. ವಿದ್ಯಾರ್ಥಿ, ಪಾಲಕರು ಹಾಗೂ ಶಿಕ್ಷಕರು ಅವಶ್ಯಕವಿರುವ ಮಾರ್ಗದರ್ಶನ ಹಾಗೂ ಸಮಾಲೋಚನೆ ದೊರಕಿಸಲು ಈ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಬಹುದು.

ಸರಕಾರ ನಿರ್ಣಯ ಕ್ರಮಾಂಕ : ಅಭ್ಯಾಸ 2116/(ಪ್ರ.ಕ್ರ. 43/16) ಎಸ್‌ಡಿ-4 ದಿನಾಂಕ 25.04.2016 ಅನ್ವಯ ಸ್ಥಾಪಿಸಲಾದ ಸಮನ್ವಯ ಸಮಿತಿಯು ದಿನಾಂಕ 01.04.2026 ರಂದು ನಡೆದ ಸಭೆಯಲ್ಲಿ ಈ ಪಠ್ಯ ಪುಸ್ತಕವನ್ನು ಕ್ರಿ.ಶ. 2026-2027 ಈ ಶೈಕ್ಷಣಿಕ ವರ್ಷದಿಂದ ನಿರ್ಧರಿಸಲು ಮಾನ್ಯತೆ ಕೊಡಲಾಗಿದೆ.

# ಕನ್ನಡ ಬಾಲಭಾರತಿ

## ಎರಡನೆಯ ಇಯತ್ತೆ



ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - ೪.

ಇಲ್ಲಿರುವ ಚೌಕಟ್ಟಿನಲ್ಲಿಯ Q.R. Code ಸ್ಮಾರ್ಟಫೋನ ಮೂಲಕ ಸ್ಕ್ಯಾನ ಮಾಡಿದರೆ ನಿಮಗೆ ಡಿಜಿಟಲ್ ಪಠ್ಯಪುಸ್ತಕ ಹಾಗೂ ಪಠ್ಯ ಪುಸ್ತಕದಲ್ಲಿಯ ಘಟಕಗಳಿಗೆ ಸಂಬಂಧಿಸಿದ ದೃಕ್, ಶ್ರಾವ್ಯ ಮತ್ತು ದೃಕ್‌ಶ್ರಾವ್ಯ ಸ್ವರೂಪದಲ್ಲಿ ಅಧ್ಯಯನ-ಅಧ್ಯಾಪನ ಸಾಹಿತ್ಯ ಉಪಲಬ್ಧವಾಗುವುದು.

ಪ್ರಥಮಾವೃತ್ತಿ : ೨೦೨೬ © ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - ೪೧೧೦೦೪.

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳವು ಈ ಪುಸ್ತಕದ ಎಲ್ಲ ಹಕ್ಕುಗಳನ್ನು ಕಾಯ್ದಿರಿಸಿದೆ. ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಸಂಚಾಲಕರ ಲಿಖಿತ ಅನುಮತಿ ಇಲ್ಲದೆ ಈ ಪುಸ್ತಕದ ಯಾವುದೇ ಭಾಗವನ್ನು ಉದ್ಧೃತಗೊಳಿಸಬಾರದು.

**ಕನ್ನಡ ಭಾಷಾ ಸಮಿತಿ:**

ಶ್ರೀಮತಿ ಶೈಲಜಾ ದೇಶಪಾಂಡೆ (ಅಧ್ಯಕ್ಷ)
ಶ್ರೀಮತಿ ಮೀನಾಕ್ಷಿ ಹನಗಂಡಿ (ಸದಸ್ಯ)
ಶ್ರೀ. ಮಹಾದೇವ ಎಸ್. ಜಾವೀರ (ಸದಸ್ಯ)
ಶ್ರೀ. ದಯಾನಂದ ಟಿ. ಹಂಜಗಿ (ಸದಸ್ಯ)
ಶ್ರೀ. ಭೀಮಾಶಂಕರ ಎಚ್. ಸಲಗರ (ಸದಸ್ಯ)
ಶ್ರೀಮತಿ ಸುವರ್ಣಾ ವ್ಹಿ. ದೀಕ್ಷಿತ (ಸದಸ್ಯ)
ಶ್ರೀ. ಆನಂದ ಎನ್. ಭಾವಿಕಟ್ಟಿ (ಸದಸ್ಯ)
ಶ್ರೀ. ಪ್ರವೀಣ ಜಿ. ಗಿರಣಿ (ಸದಸ್ಯ)
ಶ್ರೀಮತಿ ಕೇತಕಿ ಜಾನಿ
(ಪ್ರಭಾರಿ ವಿಶೇಷಾಧಿಕಾರಿ ಕನ್ನಡ)

**ಮುಖಪುಟ** : ಶ್ರೀ. ಭಟು ಬಾಗಲೆ

**ಚಿತ್ರಕಾರ** : ಶ್ರೀ. ವಿವೇಕಾನಂದ ಶಿವಶಂಕರ ಪಾಟೀಲ

**ಅಕ್ಷರ ಜೋಡಣೆ** : ಕೇಸನ್ ಲ್ಯಾಂಗ್ವೇಜ್ ಬ್ಯುರೋ, ಮುಂಬಯಿ

**ಕಾಗದ** : 70 ಜಿ. ಎಸ್. ಎಮ್. ಕ್ರಿಮವೋವ್ಹ

**ಮುದ್ರಣಾದೇಶ** :

**ಮುದ್ರಕ** :

**ಕನ್ನಡ ಸಂಯೋಜನ ಪ್ರಮುಖರು**

ಶ್ರೀಮತಿ ಕೇತಕಿ ಜಾನಿ
ಪ್ರಭಾರಿ ವಿಶೇಷಾಧಿಕಾರಿ,
ಕನ್ನಡ ಮತ್ತು ವಿದ್ಯಾಸಚಿವೆಭಾಷಾ
ಪಾಠ್ಯಪುಸ್ತಕ ಮಂಡಳ, ಪುಣೆ-4.

**ನಿರ್ಮಿತಿ:**

**ಶ್ರೀಮತಿ ಮಿತಾಲಿ ಶಿತಪ**
ಪ್ರಭಾರಿ ಮುಖ್ಯ ಉತ್ಪಾದನಾ ಅಧಿಕಾರಿ

**ಶ್ರೀ. ರಾಜೇಂದ್ರ ಪಂಡೋಲ್ಕರ್**
ನಿರ್ಮಾಣ ಅಧಿಕಾರಿ

**ಗುಣವತ್ತಾ ಸಮೀಕ್ಷಕ**

ಡಾ. ಶ್ರೀ. ಕೃ.ಶಿ. ಹೆಗಡೆ
ಶ್ರೀ. ಚಂದ್ರಕಾಂತ ದೇಶಪಾಂಡೆ
ಶ್ರೀ. ರಾಜಕುಮಾರ ಆರ್

**ಪ್ರಕಾಶಕ**

**ಶ್ರೀ. ಹೇಮಂತ ಬಾಬರ**
ಪ್ರಭಾರಿ ಮುಖ್ಯ ನಿರ್ಮಿತಿ ಅಧಿಕಾರಿ
ಪಾಠ್ಯಪುಸ್ತಕ ನಿರ್ಮಿತಿ ಮಂಡಳ
ಪ್ರಭಾದೇವಿ, ಮುಂಬಯಿ-25.

# ಭಾರತದ ಸಂವಿಧಾನ

**ಪೀಠಿಕೆ**

**ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ**
**ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ನಿರ್ಮಿಸಲು
ಹಾಗೂ ಅದರ ಸಮಸ್ತ ನಾಗರಿಕರಿಗೆ :
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ
ಮತ್ತು ಉಪಾಸನಾ **ಸ್ವಾತಂತ್ರ್ಯ;**
ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**
ನಿಶ್ಚಿತವಾಗಿ ದೊರೆಯುವಂತೆ ಮಾಡಲು
ಮತ್ತು ವ್ಯಕ್ತಿಗೌರವವನ್ನು
ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು
ಆಶ್ವಾಸನೆ ನೀಡುವ **ಬಂಧುತ್ವವನ್ನು**
ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;
**ನಮ್ಮ ಸಂವಿಧಾನ ಸಭೆಯಲ್ಲಿ**
ಇಂದು ದಿನಾಂಕ ಇಪ್ಪತ್ತಾರನೆಯ ನವೆಂಬರ, ೧೯೪೯ ನೆಯ ಇಸವಿ
**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ**
**ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

## ಭಾರತದ ಸಂವಿಧಾನ

ಭಾಗ 4 ಕ

## ನಾಗರಿಕರ ಮೂಲಭೂತ ಕರ್ತವ್ಯಗಳು

**ಅನುಚ್ಛೇದ 51 ಕ**

**ಮೂಲಭೂತ ಕರ್ತವ್ಯಗಳು-ಪ್ರತಿಯೊಬ್ಬ ಭಾರತೀಯ ನಾಗರಿಕನ ಈ ಕರ್ತವ್ಯಗಳು ಇರುತ್ತವೆ ಅಂದರೆ-**

(ಕ) ಪ್ರತಿಯೊಬ್ಬ ನಾಗರಿಕನು ಸಂವಿಧಾನವನ್ನು ಪಾಲಿಸಬೇಕು. ಸಂವಿಧಾನದಲ್ಲಿಯ ಆದರ್ಶಗಳು ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸಬೇಕು.
(ಖ) ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಕ್ಕೆ ಸ್ಫೂರ್ತಿ ನೀಡುವ ಆದರ್ಶಗಳನ್ನು ಪಾಲಿಸಬೇಕು.
(ಗ) ದೇಶದ ಸಾರ್ವಭೌಮತ್ವ ಐಕ್ಯತೆ ಮತ್ತು ಸಮಗ್ರತೆಯನ್ನು ಸುರಕ್ಷಿತವಾಗಿಡುವ ಸಲುವಾಗಿ ಪ್ರಯತ್ನಶೀಲರಾಗಿರಬೇಕು.
(ಘ) ನಮ್ಮ ದೇಶದ ರಕ್ಷಣೆ ಮಾಡಬೇಕು. ದೇಶದ ಸೇವೆ ಮಾಡಬೇಕು.
(ಙ) ಎಲ್ಲ ಪ್ರಕಾರದ ಭೇದಭಾವಗಳನ್ನು ಮರೆತು ಒಗ್ಗಟ್ಟನ್ನು ಬೆಳೆಸಬೇಕು ಹಾಗೂ ಸಹೋದರ ಭಾವನೆಯನ್ನು ಉತ್ತೇಜಿಸಬೇಕು. ಸ್ತ್ರೀಯರ ಗೌರವಕ್ಕೆ ಚ್ಯುತಿ ತರುವಂತಹ ರೂಢಿಗಳನ್ನು ತ್ಯಜಿಸಬೇಕು.
(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಬೇಕು.
(ಛ) ನೈಸರ್ಗಿಕ ಪರಿಸರವನ್ನು ಸಂರಕ್ಷಿಸಬೇಕು. ಸಜೀವ ಪ್ರಾಣಿಗಳ ಮೇಲೆ ದಯೆ ತೋರಿಸಬೇಕು.
(ಜ) ವೈಜ್ಞಾನಿಕ ಮನೋಭಾವನೆ, ಮಾನವೀಯತೆ ಮತ್ತು ಜಿಜ್ಞಾಸು ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.
(ಝ) ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ರಕ್ಷಿಸಬೇಕು. ಹಿಂಸಾಚಾರವನ್ನು ತ್ಯಜಿಸಬೇಕು.
(ಞ) ರಾಷ್ಟ್ರದ ಉತ್ತರೋತ್ತರ ಪ್ರಗತಿಯನ್ನು ಸಾಧಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕು.
(ಟ) 6 ರಿಂದ 14 ವರ್ಷ ವಯೋಮಾನದಲ್ಲಿಯ ತಮ್ಮ ಮಕ್ಕಳಿಗೆ ಪೋಷಕರು ಶಿಕ್ಷಣದ ಅವಕಾಶಗಳನ್ನು ಒದಗಿಸಿಕೊಡಬೇಕು.

## ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ॥

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

## ಪ್ರಸ್ತಾವನೆ

**ಆತ್ಮೀಯ ವಿದ್ಯಾರ್ಥಿಗಳೇ,**

ನಿಮಗೆಲ್ಲರಿಗೂ ಎರಡನೆಯ ತರಗತಿಗೆ ಸ್ವಾಗತ. ''ಕನ್ನಡ ಬಾಲಭಾರತಿ'' ಎರಡನೆಯ ತರಗತಿಯ ಈ ಪಠ್ಯಪುಸ್ತಕವನ್ನು ನಿಮ್ಮ ಕೈಗಿಡಲು ತುಂಬಾ ಆನಂದವೆನಿಸುತ್ತದೆ.

ಒಂದನೇ ತರಗತಿಯಲ್ಲಿ ನೀವು ಕನ್ನಡ ವರ್ಣಮಾಲೆಯಲ್ಲಿಯ ಅಕ್ಷರಗಳು ಹಾಗೂ ಸ್ವರಗಳಿಂದ ಪದಗಳನ್ನು ತಯಾರಿಸಲು ಕಲಿತಿದ್ದೀರಿ. ಓದುವ ಪಾಠಗಳ ಮೂಲಕ ನೀವು ಕನ್ನಡವನ್ನು ಚೆನ್ನಾಗಿ ಮಾತನಾಡಲು, ಓದಲು ಮತ್ತು ಬರೆಯಲು ಕಲಿತಿದ್ದೀರಿ. ಎರಡನೇ ತರಗತಿಯಲ್ಲಿ ನಿಮಗೆ ಕಲಿಯಲು ಬಹಳಷ್ಟು ಹೊಸ ವಿಷಯಗಳಿವೆ.

ಈ ಕನ್ನಡ ಬಾಲ ಭಾರತಿ ಎರಡನೆಯ ತರಗತಿಯ ಪಠ್ಯಪುಸ್ತಕದಲ್ಲಿರುವ ಚಿತ್ರ ವಿವರಣೆಗಳು, ಹಾಡುಗಳು, ಕವಿತೆಗಳು, ಪಾಠಗಳು, ಕಥೆಗಳು, ಚಿತ್ರಕಥೆಗಳು, ಶಬ್ದಕೋಶ ಆಧಾರಿತ ಭಾಷಾ ಆಟಗಳು, ಭಾಷಾ ಒಗಟುಗಳು ಮತ್ತು ವಿವಿಧ ಭಾಷಾ ಚಟುವಟಿಕೆಗಳನ್ನು ನೀವು ಹೊಸ ರೀತಿಯಲ್ಲಿ ತಿಳಿದುಕೊಳ್ಳುವುದಿದೆ. ಪಠ್ಯಪುಸ್ತಕದಲ್ಲಿ ಕೊಟ್ಟಿರುವ ವಿವಿಧ ಚಿತ್ರಗಳ ನಿರೀಕ್ಷಣೆ ಮಾಡಿ ನಿಮ್ಮ ಸ್ನೇಹಿತರೊಂದಿಗೆ ಸಾಕಷ್ಟು ಚರ್ಚೆ ಮಾಡುವುದಿದೆ ಮತ್ತು ಅವರೊಂದಿಗೆ ಹರಟೆ ಹೊಡೆಯುವುದಿದೆ. ಪ್ರತಿಯೊಂದು ಚಿತ್ರದಲ್ಲಿರುವ ಸೂಕ್ಷ್ಮ ವ್ಯತ್ಯಾಸಗಳನ್ನು ಗಮನದಲ್ಲಿ ತೆಗೆದುಕೊಳ್ಳುವುದಿದೆ. ಪಠ್ಯಪುಸ್ತಕವು ನಿಮಗೆ ಇಷ್ಟವಾಗುವ ಆಕರ್ಷಕ ಚಿತ್ರಗಳನ್ನು ಹೊಂದಿದೆ. ಈ ಚಿತ್ರಗಳ ಮೂಲಕ ನಿಮ್ಮ ಕನ್ನಡ ಭಾಷೆಯ ಕಲಿಕೆ ಹೆಚ್ಚು ಆನಂದದಾಯಕ ಮತ್ತು ಆಸಕ್ತಿದಾಯಕವಾಗಿರುತ್ತದೆ.

ಪಠ್ಯಪುಸ್ತಕದಲ್ಲಿರುವ ಕವಿತೆಗಳನ್ನು ನೀವು ಮಧುರ ಮತ್ತು ಲಯಬದ್ಧ ರೀತಿಯಲ್ಲಿ ಪಠಿಸಲು ಸಾಧ್ಯವಾಗುತ್ತದೆ. ಈ ಕವಿತೆಗಳನ್ನು ಪ್ರತ್ಯೇಕವಾಗಿ ಅಥವಾ ಗುಂಪಿನಲ್ಲಿ ಸಾದರಪಡಿಸುವುದರಿಂದ ನಿಮಗೆ ಖಂಡಿತವಾಗಿಯೂ ಸಂತೋಷವಾಗುತ್ತದೆ.

ಪಠ್ಯಪುಸ್ತಕದಲ್ಲಿಯ ವೈವಿಧ್ಯಮಯ ಪಾಠಗಳ ಮೂಲಕ ನೀವು ಹೊಸ ಹೊಸ ವಿಷಯಗಳನ್ನು ತಿಳಿದುಕೊಳ್ಳುವುದಿದೆ. ಪಾಠವನ್ನು ಕೇಳುವಾಗ, ಅರ್ಥ ಮಾಡಿಕೊಳ್ಳುವಾಗ ಹಾಗೂ ಪಠಿಸುವಾಗ ಖಂಡಿತವಾಗಿಯೂ ಪಾಠಗಳಲ್ಲಿ ತಲ್ಲೀನರಾಗುತ್ತೀರಿ. ಪಾಠಗಳಲ್ಲಿನ ವಿವಿಧ ವಿಷಯಗಳು ನಿಮ್ಮ ಜ್ಞಾನವನ್ನು ಇನ್ನಷ್ಟು ಹೆಚ್ಚಿಸುತ್ತವೆ ಮತ್ತು ನಿಮಗೆ ಸಂತೋಷವನ್ನು ನೀಡುತ್ತವೆ.

ಕವಿತೆಗಳು ಮತ್ತು ಪಾಠಗಳ ಕೆಳಗೆ ಕೊಟ್ಟಿರುವ ಸ್ವಾಧ್ಯಾಯವು ನಿಮ್ಮ ಆಲೋಚನಾ ಶಕ್ತಿಯನ್ನು ಹೆಚ್ಚಿಸುತ್ತದೆ. ಸ್ವಾಧ್ಯಾಯದಿಂದ ನಿಮಗೆ ಯೋಚಿಸಲು ಸಾಕಷ್ಟು ಅವಕಾಶ ನೀಡಲಾಗಿದೆ. ಶಬ್ದ ಸಂಪತ್ತಿನ ಮೇಲೆ ಆಧಾರಿತವಾಗಿರುವ ವಿವಿಧ ಒಗಟುಗಳು, ಆಟಗಳು ಮತ್ತು ಚಟುವಟಿಕೆಗಳ ಮೂಲಕ ನೀವು ವಿವಿಧ ಹೊಸ ಪದಗಳನ್ನು ಕಲಿಯುವಿರಿ. ಈ ಚಟುವಟಿಕೆಗಳ ಮೂಲಕ ನಿಮ್ಮ ಶಬ್ದ ಸಂಪತ್ತಿನಲ್ಲಿ ಖಂಡಿತವಾಗಿಯೂ ಹೆಚ್ಚಳವಾಗುವುದು.

ನೀವು ಎಲ್ಲರೂ ಸೃಜನಶೀಲರಾಗಿದ್ದೀರಿ. ಎರಡನೆಯ ತರಗತಿಯ ಈ ಪಠ್ಯಪುಸ್ತಕವನ್ನು ಅಧ್ಯಯನ ಮಾಡುವಾಗ ನಿಮಗೆ ಖಂಡಿತವಾಗಿ ಆನಂದವಾಗುವುದು.

ಪ್ರಿಯ ಸ್ನೇಹಿತರೇ, ನಿಮಗೆ ಮನಃಪೂರ್ವಕ ಶುಭ ಹಾರೈಕೆಗಳು.

**(ಅನುರಾಧ ಓಕ)**
**ಸಂಚಾಲಕರು**
ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ
ಮತ್ತು ಅಭ್ಯಾಸ ಕ್ರಮ ಸಂಶೋಧನಾ ಮಂಡಳಿ ಪುಣೆ

**ಪುಣೆ**
**ದಿನಾಂಕ : 19 ಮಾರ್ಚ್ 2026**
**ಭಾರತೀಯ ಸೌರ ದಿನಾಂಕ : ಚೈತ್ರ ಶು. 1 ಶಕೆ 1948,**
**ಅಕ್ಷಯ ತೃತೀಯಾ**

# ಅಧ್ಯಯನ ಕ್ಷಮತೆ ಮತ್ತು ಅಧ್ಯಯನ ನಿಷ್ಪತ್ತಿ

| CG | ಕ್ಷಮತೆಗಳು | ಅಧ್ಯಯನ ಕ್ಷಮತೆಗಳ ಕ್ರ. | ವಿವರಣೆ | ಪುಟ ಸಂಖ್ಯೆ |
|---|---|---|---|---|
| C 9 | C 9.1 | C 9.1.1 | ವಿಶಿಷ್ಟ ಪ್ರಕಾರದ ಹಾಡುಗಳು ಕವಿತೆಗಳನ್ನು ಕೇಳಲು ಅಭಿರುಚಿ ತೋರಿಸುತ್ತಾನೆ ಮತ್ತು ಇಷ್ಟಪಡಲು ಕಾರಣವನ್ನು ಸ್ಪಷ್ಟ ಪಡಿಸುತ್ತಾನೆ. | 1, 4, 10, 15, 19, 32, 40, 48, 57, 70 |
| | | C 9.1.2 | ಎರಡರಿಂದ ಮೂರು ಪರಿಚ್ಛೇದಗಳ ಹಾಡು/ಶಿಶು ಗೀತೆ/ ಕವಿತೆಗಳನ್ನು ಹಾಡುತ್ತಾನೆ ಹಾಗೂ ಗಟ್ಟಿಯಾಗಿ ಪುನ: ಹಾಡಿ ತೋರಿಸುತ್ತಾನೆ | 1, 4, 10, 15, 19, 30, 40, 48, 57, 70 |
| | C 9.2 | C 9.2.1 | ಸ್ವಂತ ಪದಗಳಲ್ಲಿ ಸ್ವತಂತ್ರವಾಗಿ ಚಿಕ್ಕ ಕವಿತೆ/ಪ್ರಾಸಗಳನ್ನು ರಚಿಸುತ್ತಾನೆ. | 20, 33, 71 |
| | C 9.3 | C 9.3.1 | ಅನೇಕ ಬಾರಿ ಸಂಭಾಷಣೆಗಳಲ್ಲಿ ವಿನಿಮಯ ಮಾಡುವಾಗ ಆ ಸಂಭಾಷಣೆಯ ಎಳೆಯನ್ನು ಹಿಡಿದುಕೊಳ್ಳುತ್ತಾನೆ. | 27, 34, 37, 69 |
| | | C 9.3.2 | ಯಾವುದೇ ಒಂದು ವಿಷಯದ ಕುರಿತು ಚರ್ಚೆಯಲ್ಲಿ ಭಾಗವಹಿಸುತ್ತಾನೆ. ಪ್ರಶ್ನೆಗಳನ್ನು ಕೇಳುತ್ತಾನೆ ಮತ್ತು ಪ್ರತಿಕ್ರಿಯಿಸುತ್ತಾನೆ. | 2, 3, 18, 23, 38, 39, 60, 61 |
| | C 9.4 | C 9.4.1 | ಷರತ್ತು ಬದ್ಧ ಸೂಚನೆಗಳ ಪಾಲನೆ ಮಾಡುತ್ತಾನೆ (ಉದಾ – ಮಳೆ ಬರುತ್ತಿರುವಾಗ ನೀರು ಹಾಕಬೇಡ, ಕಳೆ ತೆಗೆ, ಮಳೆ ಬರದಿದ್ದರೆ ಗಿಡಗಳಿಗೆ ನೀರು ಹಾಕು) | 12, 44, 74, 78, 79 |
| | | C 9.4.2 | ಗಣಿತೀಯ ಸೂಚನೆ ಸ್ಪಷ್ಟವಾಗಿ ಹೇಳುತ್ತಾನೆ. (ದಿಶಾದರ್ಶಕ, ಅವಕಾಶೀಯ ಸಂಬೋಧನೆ, ಭೌತಿಕ ಪರಿಮಾಣವಿರುವ) | 2, 3, 37, 59, 62, 63, 64, 70 |
| | C 9.5 | C 9.5.1 | ಲೇಖಕರು ಬರೆದ ಕಥೆಯ ಹಿಂದಿರುವ ಪ್ರೇರಣೆ ಸ್ಪಷ್ಟ ಪಡಿಸುತ್ತಾನೆ ಮತ್ತು ತಾನೇ ಲೇಖಕ ಎಂದು ಕಲ್ಪನೆ ಮಾಡಿಕೊಂಡು ಕಥೆಯನ್ನು ಮತ್ತೆ ಹೇಳುತ್ತಾನೆ. | 23, 27, 61 |
| | | C 9.5.2 | ಕಥೆ ಹೇಳುವಾಗ ಸೂಕ್ಷ್ಮ ವಿಚಾರಗಳನ್ನು ಉದಾಹರಣೆ ಸಹಿತ ಹೇಳುತ್ತಾನೆ. ಉದಾ: ಸಾಕಷ್ಟು ಮಳೆ ಬಂದು ದಾರಿ ಕೆಸರಾಗಿತ್ತು. ಆ ಕೆಸರಿನಲ್ಲಿ ಎತ್ತಿನ ಗಾಡಿಯ ಚಕ್ರ ಸಿಕ್ಕಿತು. | 18, 23, 60, 61 |
| | | C 9.5.3 | ಕೇಳಿದ ಕಥೆಯಲ್ಲಿ ಇಷ್ಟವಾದ, ಇಷ್ಟವಾಗದ ಭಾಗ ಹೇಳುತ್ತಾನೆ | 28, 60, 61, 67, 72, 73 |
| | C 9.6 | C 9.6.1 | ಸಂದಿಗ್ಧ ಕಥಾ ವಸ್ತು ಮತ್ತು ಬಹುವಿಧ ಪಾತ್ರಸಹಿತ ಸ್ವಂತದ ಕಥೆಯನ್ನು ತಯಾರಿಸುತ್ತಾನೆ. | 21, 22, 61, 75 |
| | C 9.7 | C 9.7.1 | ಆಶಯದಲ್ಲಿ ಬಂದಿರುವ ಅಪರಿಚಿತ ಶಬ್ದಗಳ ಅರ್ಥ ತಿಳಿದುಕೊಳ್ಳಲು ಬಾಲ ಶಬ್ದಕೋಶದ ಉಪಯೋಗ ಮಾಡುತ್ತಾನೆ. | 11, 33, 55, 64, 70, 77 |
| | C 10.1 | C 10.1.1 | ಅಕ್ಷರಗಳನ್ನು ಸ್ವರ – ವ್ಯಂಜನಗಳಲ್ಲಿ ವಿಭಾಗಿಸುತ್ತಾನೆ | 6, 11, 33 |
| | C 10.2 | C 10.2.1 | ಸುಲಭ ವಿರಾಮ ಚಿಹ್ನೆಗಳನ್ನು ಯೋಗ್ಯ ರೀತಿಯಲ್ಲಿ ಬಳಸುತ್ತಾನೆ. (ಪೂರ್ಣ ವಿರಾಮ, ಪ್ರಶ್ನಾರ್ಥಕ ಚಿಹ್ನೆ) | 28, 44, 64 |
| | C 10.3. | C 10.3.1 | ಬಹುವರ್ಣೀಯ ಶಬ್ದ (ಒತ್ತಕ್ಷರಯುಕ್ತ) ಮತ್ತು ಅರ್ಥಹೀನ ಶಬ್ದ ತಪ್ಪದೆ ಓದುತ್ತಾನೆ. | 29, 30, 31, 72, 73 |
| | C 10.4 | C 10.4.1 | ಚಿಕ್ಕ ಪರಿಚ್ಛೇದಗಳ ವಾಚನವನ್ನು ಯೋಗ್ಯ ಉಚ್ಚಾರಣೆ, ವಿರಾಮ ಹಾಗೂ ಧ್ವನಿಯಲ್ಲಿಯ ಏರಿಳಿತದೊಂದಿಗೆ ಸರಿಯಾಗಿ ಮಾಡುತ್ತಾನೆ. | 8, 27, 46, 65 |
| CG-10 | C 10.5 | C 10.5.1 | ದೃಶ್ಯ ಆಶಯಕ್ಕಿಂತ ಹೆಚ್ಚು ಪಠ್ಯಾಂಶಗಳಿರುವ ಪುಸ್ತಕಗಳನ್ನು ಸ್ವತಂತ್ರವಾಗಿ ವಾಚನ ಮಾಡಲು ಪ್ರಾರಂಭಿಸುತ್ತಾನೆ. | 50, 51, 54, 55, 62, 63, 66, 76 |
| | | C 10.5.2 | ಕಥೆಯ ಕಥಾವಸ್ತು ಪಾತ್ರಗಳು ಘಟನೆ ಕ್ರಮ ಗುರುತಿಸುವವನು ಮತ್ತು ಲೇಖಕರ ದೃಷ್ಟಿಕೋನ ಗಮನದಲ್ಲಿಟ್ಟುಕೊಂಡು ವಾಚನ ಮಾಡುವವನು. | 24, 25, 26, 30, 66, 67 |
| | C 10.6 | C 10.6.1 | ಚಿಕ್ಕ ಕವಿತೆ ಓದುತ್ತಾನೆ ಮತ್ತು ಕವಿಯ ಕಲ್ಪನೆಯನ್ನು ಊಹಿಸುತ್ತಾನೆ. | 1, 4, 10, 15, 19, 57 |

| | | | |
|---|---|---|---|
| C 10.7 | C 10.7.1 | ಚಿಕ್ಕ ಚಿಕ್ಕ ಸುದ್ದಿಗಳನ್ನು ಹಾಗೆಯೇ ಪ್ರಕಾಶಿತ ಸಾಹಿತ್ಯವನ್ನು ಓದುತ್ತಾನೆ ಮತ್ತು ಅದರಲ್ಲಿಯ ಆಶಯ ಸ್ಪಷ್ಟಪಡಿಸುತ್ತಾನೆ. | 76, 77 |
| C 10.8 | C 10.8.1 | ಚಿತ್ರಗಳ ಆಧಾರದ ಮೇಲೆ ಚಿತ್ರ ವರ್ಣನೆ ಅಥವಾ ಕಥೆಯ ಸ್ವರೂಪದಲ್ಲಿ ಪಾರಂಪರಿಕ ಲೇಖನ ಮಾಡುತ್ತಾನೆ. | 16, 17, 18, 36, 37, 41 |
| | C 10.8.2 | ಚಿತ್ರ ಪುಸ್ತಕಗಳಿಂದ ಊಹೆ ಮಾಡಿ ಕಥೆಗಳನ್ನು ಬರೆಯುತ್ತಾನೆ. | 18, 23 |
| | C 10.8.3 | ಚಿಕ್ಕ ವಾಕ್ಯಗಳ ಶ್ರುತಲೇಖನ ಮಾಡುತ್ತಾನೆ. | 57, 58 |
| | C 10.8.4 | ಘಟನೆ ಮತ್ತು ಅನುಭವ ವರ್ಣನೆ ಮಾಡುವುದಕ್ಕಾಗಿ ಚಿಕ್ಕ ವಾಕ್ಯಗಳನ್ನು ಬರೆಯುತ್ತಾನೆ. | 28, 33, 36, 65 |
| | C 10.8.5 | ಎರಡು ಪಾತ್ರಗಳ ನಡುವಿನ ಸಂವಾದವನ್ನು ಕಲ್ಪನೆ ಮಾಡಿಕೊಂಡು ನಾಲ್ಕೈದು ವಾಕ್ಯಗಳಲ್ಲಿ ಬರೆಯುತ್ತಾನೆ. (ತರಕಾರಿ ಮಾರಾಟಗಾರ ಹಾಗೂ ಕೊಳ್ಳುವವ) | 37, 42, 61 |
| | C 10.8.6 | ಪಾಕ ಕೃತಿ/ಕಾಗದದಿಂದ ವಸ್ತು ತಯಾರಿಸುವ ಕೃತಿ/ಯಾವುದೇ ಒಂದು ಆಟವನ್ನು ಹೇಗೆ ಆಡುವುದು ಎಂಬುದರ ಕುರಿತು ನಾಲ್ಕೈದು ವಾಕ್ಯಗಳಲ್ಲಿ ಬರೆಯುತ್ತಾನೆ. | 14, 27, 36, 56 |
| C 10.9 | C 10.9.1 | ಪುಸ್ತಕಗಳ ಬಗ್ಗೆ ಅಭಿರುಚಿಯನ್ನು ತೋರಿಸಿ ವಾಸ್ತವ ಹಾಗೂ ಕಾಲ್ಪನಿಕ ಈ ಎರಡೂ ಪ್ರಕಾರಗಳ ಪುಸ್ತಕಗಳನ್ನು ಓದುತ್ತಾನೆ. | 61, 69, 76, 78 |
| | C 10.9.2 | ಶಾಲೆಯ ಗ್ರಂಥಾಲಯದಲ್ಲಿಯ ಪುಸ್ತಕಗಳ ಕುರಿತು ಕಾಳಜಿವಹಿಸುತ್ತಾನೆ ಹಾಗೂ ವ್ಯವಸ್ಥಿತವಾಗಿ ಇಡುತ್ತಾನೆ. | 61, 69, 78, 79 |

## ಪಠ್ಯಪುಸ್ತಕವನ್ನು ಅವಲೋಕಿಸುವಾಗ

- ರಾಷ್ಟ್ರೀಯ ಶಿಕ್ಷಣ ಧೋರಣೆ 2020 ರ ಮೇಲೆ ಆಧಾರಿತವಾದ ಈ ಪಠ್ಯಪುಸ್ತಕವು ಮಕ್ಕಳ ಭಾಷಾ ಕೌಶಲ್ಯ ವಿಕಾಸದಲ್ಲಿ ಮಹತ್ವಪೂರ್ಣ ಪಾತ್ರವಹಿಸಲಿದೆ. ಈ ಪಠ್ಯಪುಸ್ತಕವನ್ನು ಮಕ್ಕಳ ಪ್ರಾಥಮಿಕ ಶಿಕ್ಷಣವನ್ನು ಸುಲಭಗೊಳಿಸುವಂತೆ ವಿನ್ಯಾಸಗೊಳಿಸಲಾಗಿದೆ. ಇದರಲ್ಲಿ ಮಕ್ಕಳ ಅಧ್ಯಯನ ಮತ್ತು ಅಭ್ಯಾಸದ ಹಂತಗಳನ್ನು ಗಮನದಲ್ಲಿಟ್ಟುಕೊಂಡು ವಿವಿಧ ವಿಷಯಗಳನ್ನು ಸೇರಿಸಲಾಗಿದೆ.
- ಎರಡನೆಯ ತರಗತಿಯಲ್ಲಿ ಸಂಯುಕ್ತ ವಾಕ್ಯಗಳ ವಾಚನ ಲೇಖನಗಳನ್ನು ಚಿಕ್ಕಚಿಕ್ಕ ಪರಿಚ್ಛೇದಗಳನ್ನು ಓದಿ ಬರೆಯುವುದನ್ನು ಕೊಡಲಾಗಿದೆ. ಪಠ್ಯಪುಸ್ತಕದಲ್ಲಿ ಚಿತ್ರ ವಿವರಣೆಗಳು, ಕಥೆಗಳು, ಚಿತ್ರಕಥೆಗಳು, ಶಬ್ದಕೋಶ ಆಧಾರಿತ ವಿವಿಧ ಭಾಷಾ ಚಟುವಟಿಕೆಗಳನ್ನು ಕೊಡಲಾಗಿದೆ.
- ಚಿತ್ರ ಹರಟೆ ಚಟುವಟಿಕೆಯಿಂದ ಮಕ್ಕಳು ಸೂಕ್ಷ್ಮ ನಿರೀಕ್ಷಣೆ ಮಾಡಿ ವಿವರಿಸುವ ಶಕ್ತಿ ಮತ್ತು ಸಂಭಾಷಣೆ ಕೌಶಲ್ಯವನ್ನು ಪಡೆದುಕೊಳ್ಳುತ್ತಾರೆ ತಮ್ಮ ಅನುಭವ ಹಂಚಿಕೊಳ್ಳುವ ಮೂಲಕ ಭಾಷಾ ಅಭಿವ್ಯಕ್ತಿಯಲ್ಲಿಯೂ ನಿಪುಣತೆ ಗಳಿಸುತ್ತಾರೆ.
- ಪಠ್ಯಪುಸ್ತಕದಲ್ಲಿಯ ಕವಿತೆಗಳು ಮಧುರ ಧ್ವನಿ ಮತ್ತು ಲಯಬದ್ಧ ರೀತಿಯಲ್ಲಿ ಹೇಳಲು ಸಾಧ್ಯವಾಗುತ್ತವೆ ಉದಾಹರಣೆ:- ಝುಕ್ಕಣಕ್ಕ ಜೈ, ಬೆಂಡೆಕಾಯಿ, ತೊಂಡೆಕಾಯಿ, ವಿದ್ಯೆ ಕಲಿತು ಜಾಣನಾಗು ಇಂತಹ ಕೆಲವು ಪಾಠಗಳು ಭಾರತೀಯ ಸಂಸ್ಕೃತಿಯನ್ನು ತಿಳಿದುಕೊಳ್ಳುವಂತಹ ಪಠ್ಯರೂಪವೂ ಕೂಡ ಇಲ್ಲಿ ಮೂಡಿಬಂದಿದೆ.
- ಪರಿಸರದ ಸ್ವಚ್ಛತೆಯ ಮತ್ತು ನಿಸರ್ಗದಲ್ಲಿ ದೊರೆಯುವ ವಸ್ತುಗಳನ್ನು ಉಪಯೋಗಿಸಿ ಪರಿಸರದ ರಕ್ಷಣೆ ಕುರಿತು ಪಾಠಗಳನ್ನು ಅಳವಡಿಸಲಾಗಿದೆ.
- ಚಿತ್ರಕಥೆ, ಪುಣ್ಯಕೋಟಿ, ಉಪಕಾರ ಜೀವನದ ಮೌಲ್ಯಗಳನ್ನು ತಿಳಿಸಿಕೊಡುವಂತಹ ಪಠ್ಯಾಂಶಗಳು ಅದರ ಜೊತೆಗೆ ವ್ಯವಹಾರಿಕ ಜ್ಞಾನ ಮೂಡಿಸುವ ಪಾಠ 'ಪುಟ್ಟ ಪುಟ್ಟಿ'ಯ ಪ್ರವಾಸ ಮತ್ತು 'ನಾನೇಕೆ ಹಾರಲಾರೆ' ಎಂಬ ಕವಿತೆ ಕಲ್ಪನಾ ಶಕ್ತಿ ವೃದ್ಧಿಸುತ್ತವೆ.
- ಕೃತಿಯುಕ್ತ ಹಸಿರು ಬಟ್ಟಲು, ಹೇಳು ನಾನಾರು,ರಕ್ಷಾಬಂಧನದಂತಹ ಪಾಠಗಳಿಂದ ವಿವಿಧ ಕೌಶಲ್ಯಗಳು ಅಭಿವೃದ್ಧಿ ಆಸಕ್ತಿಯನ್ನು ಮೂಡಿಸುತ್ತವೆ.
- ಪರಿವಾರದಲ್ಲಿ ಸ್ನೇಹ, ಪ್ರೀತಿ, ಸೌಹಾರ್ದತೆ, ಸಂಬಂಧಗಳನ್ನು ತಿಳಿಸಿಕೊಡುವಂತಹ ಪಾಠಗಳನ್ನು ಅಳವಡಿಸಲಾಗಿದೆ.
- 'ಒಂದು ಸುತ್ತು ಗ್ರಂಥಾಲಯ' ಎಂಬ ಜ್ಞಾನವಿಕಾಸದ ಮೆಟ್ಟಿಲಾದ ಪುಸ್ತಕ ಪ್ರೇಮವನ್ನು ಜಾಗೃತಗೊಳಿಸುವ ಪಾಠವನ್ನು ಅಳವಡಿಸಲಾಗಿದೆ. ಪೂರ್ಣವಿರಾಮ,ಪ್ರಶ್ನೆ ಚಿಹ್ನೆಗಳ ಮೂಲಕ ವಾಕ್ಯ ರಚನೆಯ ಪರಿಚಯ ಮಾಡಿಕೊಡಲಾಗಿದೆ.
- ಈ ಪಠ್ಯಪುಸ್ತಕವು ಓದು, ಬರಹ, ಕೌಶಲ್ಯ ಅಭಿವೃದ್ಧಿ, ಪದ್ಯ, ಗದ್ಯ, ನೈತಿಕ ಮೌಲ್ಯಗಳನ್ನು ಒಳಗೊಂಡಂತೆ ಸಮಗ್ರ ಶಿಕ್ಷಣವನ್ನು ನೀಡುವಂತೆ ವಿನ್ಯಾಸಗೊಳಿಸಲಾಗಿದೆ. ಮಕ್ಕಳ ಕಲಿಕೆಯ ಪಯಣದಲ್ಲಿ ಆಸಕ್ತಿ ಮೂಡಿಸುವಂತೆ ಈ ಪುಸ್ತಕವನ್ನು ರೂಪಿಸಲಾಗಿದೆ. ಆಕರ್ಷಕ ಚಿತ್ರಗಳಿಂದ, ವರ್ಣರಂಜಿತವಾಗಿ ಪುಸ್ತಕವನ್ನು ನಿರ್ಮಿಸಲಾಗಿದೆ.



**ಶಿಕ್ಷಕರಿಗೆ ಸೂಚನೆ:** ಅಗತ್ಯವಿರುವ ವಿದ್ಯಾರ್ಥಿಗಳಿಗೆ ಅಧ್ಯಯನ-ಅಧ್ಯಾಪನ ಪ್ರಕ್ರಿಯೆಯನ್ನು ನಡೆಸುವಾಗ ಸಾಂಕೇತಿಕ ಭಾಷೆ (ಸೈನ್ ಲ್ಯಾಂಗ್ವೇಜ್) ಮತ್ತು ಇತರ ಪೂರಕ ಅಧ್ಯಾಪನ ಪದ್ಧತಿಗಳನ್ನು ಬಳಸಿಕೊಳ್ಳಬೇಕು. ವಿಶೇಷ ಅಗತ್ಯವಿರುವ ವಿದ್ಯಾರ್ಥಿಗಳಿಗೆ ಅವರಿಂದ ಸಾಧ್ಯವಾಗುವ ಯಾವುದೇ ಪದ್ಧತಿಯಿಂದ ವ್ಯಕ್ತಪಡಿಸಲು ಅವಕಾಶವನ್ನು ಒದಗಿಸಿಕೊಡಬೇಕು.

# ಪರಿವಿಡಿ


| ಅ.ನಂ | ಪಾಠದ ಹೆಸರು | ಕವಿ/ಲೇಖಕರು | ಪುಟ ಸಂಖ್ಯೆ |
|---|---|---|---|
| | **(ಭಾಗ-1)** | | |
| 1. | ನಮನ | | 1 |
| | **ಚಿತ್ರ ಹರಟೆ-ವಾರದ ಸಂತೆ-ಸುಪರ್ ಬಜಾರ್** | | **2,3** |
| 2. | ಝುಕ್ಕಣಕ್ಕ ಜೈ (ಕವಿತೆ) | ಎಚ್. ಎಸ್. ವೆಂಕಟೇಶಮೂರ್ತಿ | 4 |
| 3. | ನನ್ನ ಅಪ್ಪ | | 7 |
| 4. | ಕಾಮನಬಿಲ್ಲು ಕಮಾನು ಕಟ್ಟಿದೆ (ಕವಿತೆ) | ಕುವೆಂಪು | 10 |
| 5. | ರಕ್ಷಾ ಬಂಧನ | | 13 |
| 6. | ಆಡೋಣ ಬಾ (ಕವಿತೆ) | | |
| | **(ಭಾಗ-2)** | | |
| | **ಚಿತ್ರ ಕಥೆ-ಪ್ರಯತ್ನಕ್ಕೆ ಫಲ** | | **18** |
| 7. | ವಿದ್ಯೆ ಕಲಿತು ಜಾಣನಾಗು (ಕವಿತೆ) | ಜೀನಹಳ್ಳಿ ಸಿದ್ದಲಿಂಗಪ್ಪ | 19 |
| | **ಚಿತ್ರಕಥೆ ಪುಣ್ಯ ಕೋಟಿ** | | **23** |
| 8. | ಜೋಳ ಯಾರು ಬಿತ್ತುವಿರಿ? | | 24 |
| 9. | ಉಪಕಾರ | | 29 |
| 10. | ಅಜ್ಜಿಯ ಟ್ರಂಕು (ಕವಿತೆ) | ನರಸಿಂಹಾರೆಡ್ಡಿ ಯಂಕಾಮೋಳ | 32 |
| 11. | ಸಂವಾದ – ಹೇಳು ನಾನಾರು? | | 34 |
| | **(ಭಾಗ-3)** | | |
| | **ಚಿತ್ರ ಹರಟೆ – ಸಾರಿಗೆ** | | **38,39** |
| 12. | ಬೆಂಡೆಕಾಯಿ ತೊಂಡೆಕಾಯಿ (ಕವಿತೆ) | ಆರ್. ರಾಧಾಕೃಷ್ಣ | 40 |
| 13 | ಸಂತೋಷಪುರದ ಕೆರೆ | | 43 |
| 14. | ರೈತ | | 45 |
| 15. | ಬೀಜ ಹೂವು ಕಾಯಿ (ಕವಿತೆ) | | 48 |
| 16. | ಅಜ್ಜನಜೊತೆ ಹರಟೆ | | 50 |
| 17. | ಹಸಿರು ಬಟ್ಟಲು | | 54 |
| | **(ಭಾಗ-4)** | | |
| 18. | ನನ್ನ ಶಾಲೆ (ಕವಿತೆ) | ಬಾಪು ಖಾಂಡೆ | 57 |
| | **ಚಿತ್ರಕಥೆ-ಇರುವೆ ಮತ್ತು ಮಿಡತೆ** | | **60, 61** |
| 19. | ಪುಟ್ಟ-ಪುಟ್ಟಿಯ ಪ್ರವಾಸ | | 62 |
| 20. | ಪ್ರಾಣಿಗಳ ಗೆಳೆತನ | | 66 |
| 21. | ನಾನೇಕೆ ಹಾರಲಾರೆ? (ಕವಿತೆ) | | 70 |
| 22. | ಗೋಪಿ ಕಲಿತ ಪಾಠ | | 72 |
| 23. | ಸಾಹಸಿ ಬಾಲಕ | | 76 |
| | **ಚಿತ್ರ ಹರಟೆ – ಒಂದು ಸುತ್ತು ಗ್ರಂಥಾಲಯದಲ್ಲಿ** | | **78,79** |
| | **ಶಬ್ದ ಕೋಶ** | | **80** |




ಕೇಳು ಮಾತು/ಚರ್ಚೆ ಓದು ಬರೆ ಹಾಡು ಅಭಿನಯಿಸು ಕಥೆ ಹೇಳು ಶೋಧಿಸು ಶಬ್ದಕೋಶ ನಾಲಿಗೆ ನುಲಿ ಸನ್ನೆ

# 1. ನಮನ



ಕನ್ನಡ ಭಾಷೆಯ ಕುಡಿಗಳು ನಾವು
ಕನ್ನಡ ಭಾಷೆಯ ನುಡಿಯುವೆವು

ಕನ್ನಡ ಸಿರಿಯನು ಬೆಳಗಲು ನಾವು
ಸಾಲಾಗಿ ಎಲ್ಲರೂ ನಿಲ್ಲುವೆವು

ಕನ್ನಡ ಭಾಷೆಯ ಉಳಿಸಲು ಬೆಳೆಸಲು
ಕಂಕಣ ತೊಟ್ಟು ನಿಲ್ಲುವೆವು

ಅಂದದ ಚಂದದ ನಡೆ ನುಡಿ ಕಲಿತು
ಭಾಷೆಯ ಹಿರಿಮೆಯ ಸಾರುವೆವು

ಕನ್ನಡ ತಾಯಿಗೆ ಶಿರವನು ಬಾಗಿಸಿ
ಧನ್ಯತಾ ಭಾವದಿ ನಮಿಸುವೆವು.

**ಮಾತನಾಡೋಣ ಬನ್ನಿ.**

1) ಈ ಪದ್ಯದಲ್ಲಿ ಯಾವ ಭಾಷೆಯ ಕುರಿತು ಹೇಳಲಾಗಿದೆ?
2) ನಿಮಗೆ ಗೊತ್ತಿರುವ ಒಂದು ಪ್ರಾರ್ಥನೆ ಗೀತೆಯನ್ನು ಹಾಡಿ ತೋರಿಸಿ.
3) ನಾವು ಯಾರ ಕುಡಿಗಳು?
4) ನಾವು ಏನನ್ನು ಉಳಿಸಿ ಬೆಳೆಸಲು ಕಂಕಣ ಕಟ್ಟುವೆವು?

❖ **ಕೆಳಗೆ ಕೊಟ್ಟಂತೆ ಬೇರೆ ಪ್ರಾಸಪದಗಳನ್ನು ಮಕ್ಕಳಿಂದ ಹೇಳಿಸಿಕೊಳ್ಳಿರಿ.**

ಉದಾ:- ಅಂದದ ಚಂದದ, ಉಳಿಸಲು ಬೆಳೆಸಲು

**ಸೂಚನೆ:** ಮಕ್ಕಳ ಜೊತೆಗೆ ಕವಿತೆಯನ್ನು ಲಯಬದ್ಧವಾಗಿ ಹಾಡಿರಿ ಮತ್ತು ಹಾಡಿಸಿಕೊಳ್ಳಿರಿ.

**ಜ್ಞಾನ ದೇಗುಲವಿದು, ಕೈಮುಗಿದು ಒಳಗೆ ಬಾ**

# ಚಿತ್ರ ಹರಟೆ-ವಾರದ ಸಂತೆ



# ಸುಪರ್ ಬಜಾರ್




**ಸೂಚನೆ:** ಈ ಮೇಲಿನ ಎರಡು ಚಿತ್ರಗಳನ್ನು ನೋಡಿರಿ. ನಿಮ್ಮ ಗೆಳೆಯರೊಂದಿಗೆ ಅದರ ಬಗ್ಗೆ ಚರ್ಚಿಸಿರಿ. ಈ ಚಿತ್ರಗಳಲ್ಲಿ ನಿಮಗೆ ಏನೇನು ಕಾಣುತ್ತಿವೆ? ಇವೆರಡೂ ಚಿತ್ರಗಳಲ್ಲಿ ನಿಮಗೆ ಯಾವ ಸ್ಥಳಕ್ಕೆ ಹೋಗಲು ಇಷ್ಟ ? ಚಿತ್ರದಲ್ಲಿ ಬಾಲಕನ ಕೈಯಲ್ಲಿ ಯಾವ ಬಣ್ಣದ ಬಲೂನು ಇದೆ? ಇವೆರಡೂ ಚಿತ್ರಗಳಲ್ಲಿ ಕಂಡು ಬರುವ ವ್ಯತ್ಯಾಸಗಳು ಯಾವವು? ನೀವು ನಿಮ್ಮ ಪರಿವಾರದೊಡನೆ ಭೇಟಿ ನೀಡಿದ ಬೇರೆ ಸ್ಥಳಗಳ ಬಗ್ಗೆ ಚರ್ಚೆ ಮಾಡಿರಿ.

# 2. ಝುಕ್ಕಣಕ್ಕ ಜೈ

ಝುಕ್ಕಣಕ್ಕ ಝುಕ್ಕಣಕ್ಕ ಝುಕ್ಕಣಕ್ಕ ಜೈ
ದೊಡ್ಡಣ್ಣೋರು ಕುಣಿತಿದ್ರೂ, ಥಕ್ ಧಿನ್ನ ಧಿನ್ನ ಥೈ
ಕುಣಿತಿದ್ರೂ, ದೊಡ್ಡಣ್ಣೋರು ಹೊತ್ತುಕೊಂಡು ಮೈ
ಇಟ್ಟೇಬಿಟ್ರೂ, ಪುಟ್ಟಮ್ಮೋರು ನೆತ್ತಿ ಮೇಲೆ ಕೈ

ದಾರೀಲಾಗ ಬರ್ತಾ ಇದ್ರು, ಅಡಿಕೆ ಮಂಡಿ ಪೈ
ಮಾಡಿಕೊಳ್ತಾ ಏನೋ ಲೆಕ್ಕ ಜೇಬಲ್ಲಿತ್ತು ಕೈ
ದೊಡ್ಡಣ್ಣೋರು ಡಿಕ್ಕಿ ಕೊಟ್ರು, ಬಿದ್ದೇ ಬಿಟ್ರು ಪೈ
ಮಂಡೆ ಒಡದ್ರೂ, ಜೇಬಲ್ಲಿತ್ತು ಪೈ ಸಮೇತ ಕೈ

ದೊಡ್ಡಣ್ಣೋರು ಪೈ ಮಾವನ್ನ ನೋಡ್ತಾ ಅಂದ್ರು, ಹೊಯ್
ಒಬ್ರೇ ಹೀಗೆ ಬೀಳ್ಬಹುದೇನು ಹಿಡೀರಿ ನನ್ನ ಕೈ
ಎತ್ತೋವಾಗ ಕೂಗ್ತಾ ಇದ್ರು, ಹನುಮಣ್ಣೋರ್ಗೆ ಜೈ
ಆಕಡೆಗವ್ರು, ಈಕಡೆಗಿವ್ರು, ಹೇಳ್ತಾ ಟಾಟಾ ಬೈ

– ಎಚ್. ಎಸ್. ವೆಂಕಟೇಶಮೂರ್ತಿ



## ◈ ಶಬ್ದಗಳ ಅರ್ಥ ಓದು:

1) ನೆತ್ತಿ – ತಲೆಯ ಮಧ್ಯಭಾಗ
2) ಮಂಡಿ – ಬಜಾರ, ಪೇಟೆ



## ಮಾತನಾಡೋಣ ಬನ್ನಿ.

1) ನಿನಗೆ ಯಾವಾಗ ಕುಣಿಯಲು ಇಷ್ಟ?
2) ಈ ಕವಿತೆ ಏಕೆ ಇಷ್ಟವಾಯಿತು?



## ಪದ ಓದು ಮತ್ತು ಪದ ಹುಡುಕು.

ಬೀಳು   ನೆತ್ತಿ   ನೆಲ

ಝುಕ್ಕಣಕ್ಕ   ಜೇಬು   ಡಿಕ್ಕಿ

| | | | | | |
|---|---|---|---|---|---|
| ಣಿ | ಝು | ಜೇ | ದೊ | ಪ | ಡಿ |
| ಕು | ಕ್ಕ | ಮಂ | ಬು | ಡ್ಡ | ಕ್ಕಿ |
| ಪು | ಣ | ಮ | ಳು | ರಿ | ಣ್ಣ |
| ಟ್ಟ | ಕ್ಕ | ಬೀ | ದಾ | ನೆ | ನ |
| ಮ್ಮ | ಹ | ನು | ಮ | ಲ | ತ್ತಿ |

ಹನುಮ   ಪುಟ್ಟಮ್ಮ   ಕುಣಿ

ನರಿ   ದಾರಿ   ದೊಡ್ಡಣ್ಣ



## ಈ ಕೆಳಗಿನ ಪದಗಳನ್ನು ಗ್ರಾಂಥಿಕ ಭಾಷೆಯಲ್ಲಿ ಹೇಳಿರಿ, ಹೇಳಿಸಿಕೊಳ್ಳಿರಿ, ಮತ್ತು ಬರೆಯಿರಿ.

ಉದಾ: ಎತ್ತೋವಾಗ ಕೂಗ್ತಾ ಇದ್ರು.
ಎತ್ತುವಾಗ ಕೂಗುತ್ತಾ ಇದ್ದರು.

1) ದೊಡ್ಡಣ್ಣೋರು ಕುಣಿತಿದ್ರು ______________________
2) ಇಟ್ಟೇಬಿಟ್ರೂ ಪುಟ್ಟಮ್ಮೋರು ______________________
3) ದಾರೀಲಾಗ ಬರ್ತಾ ಇದ್ರು ______________________
4) ಮಂಡೆ ಒಡದ್ರೂ ______________________
5) ಮಾವನ್ನ ನೋಡ್ತಾ ಅಂದ್ರು ______________________
6) ಒಬ್ರೆ ಹೀಗೆ ಬೀಳ್ಬಹುದೇನು ______________________
7) ಎತ್ತೋವಾಗ ಕೂಗ್ತಾ ಇದ್ರು ______________________
8) ಹನುಮಣ್ಣೋರ್ಗೆ ______________________
9) ಆಕಡೆಗವ್ರು ಈಕಡೆಗಿವ್ರು ಹೇಳ್ತಾ ______________________



**ಓದಿರಿ, ಸ್ವರ ಮತ್ತು ವ್ಯಂಜನಗಳನ್ನು ಬಿಟ್ಟ ಸ್ಥಳದಲ್ಲಿ ಬರೆಯಿರಿ.**




**ಸೂಚನೆ :** ಮಕ್ಕಳ ಜೊತೆಗೆ ಸಾಭಿನಯದೊಂದಿಗೆ ಕವಿತೆಯನ್ನು ಲಯಬದ್ಧವಾಗಿ ಹಾಡಿರಿ ಮತ್ತು ಹಾಡಿಸಿಕೊಳ್ಳಿರಿ. ಪದ್ಯದಲ್ಲಿ ಬಂದ ಆಡು ಭಾಷೆಯ ಶಬ್ದಗಳ ಬಗ್ಗೆ ಚರ್ಚಿಸಿರಿ.

ಮನೆಯಲ್ಲಿ/ಗ್ರಂಥಾಲಯದಲ್ಲಿನ ಪುಸ್ತಕಗಳಿಂದ ಇನ್ನಷ್ಟು ಹಾಸ್ಯಕವನಗಳನ್ನು ಕೊಟ್ಟು ಹಾಡಿಸಿಕೊಳ್ಳಿರಿ.

**ಆಡಿ ಕಲಿ, ನಕ್ಕು ನಲಿ**

# 3. ನನ್ನ ಅಪ್ಪ

ಅಪ್ಪ, ನನ್ನ ಪ್ರೀತಿಯ ಅಪ್ಪ. ನಾನು ಹುಟ್ಟಿದ ಮೇಲೆ ಸಿಹಿ ಹಂಚಿ ಸಂಭ್ರಮಿಸಿದ ಅಪ್ಪ, ಅಪ್ಪನೇ ನನ್ನ ಒಳ್ಳೆಯ ಗೆಳೆಯ. ನಿಜಕ್ಕೂ ಪ್ರಿಯ ಮಿತ್ರ.



ನನ್ನನ್ನು ಎತ್ತಿ ಮುದ್ದಾಡುವ ಮುದ್ದಿನ ಅಪ್ಪ ಕೈ ಹಿಡಿದು ನಡೆಯಲು ಕಲಿಸಿದ ಗುರು. ಬಿದ್ದರೂ ಪೆಟ್ಟಾಗದಂತೆ ಕಾಳಜಿ ವಹಿಸುವ ಕಳಕಳಿಯ ಜೀವ. ಕಂಕುಳಲ್ಲಿ ಕೈ ಹಾಕಿ ಮೇಲೆ ಹಾರಿಸಿ ಖುಷಿ ಪಡುವ ಜನಕ. ಮತ್ತೆ ಕ್ಯಾಚ್ ಹಿಡಿದು ಸಂಭ್ರಮಿಸುವ ರಾಜ. ಅಂಗೈಯಲ್ಲಿ ಅಲುಗಾಡದಂತೆ ನಿಲ್ಲಿಸಿ ಫೋಟೊ ತೆಗೆಸಿಕೊಳ್ಳುವ ಮಿತ್ರ.

ಈ ಅಪ್ಪ ಪ್ರತಿ ಹಬ್ಬಕ್ಕೆ ನನಗೆ ತರುವನು ಬಣ್ಣಬಣ್ಣದ ಬಟ್ಟೆ. ಹುಟ್ಟು ಹಬ್ಬಕ್ಕೆ ಖುಷಿಯಿಂದ ಎಲ್ಲರಿಗೂ ನೀಡುವನು ಔತಣ. ಬೈಕಿನ ಮೇಲೆ ನನ್ನದೇ ಹೆಸರು ಹಾಕಿಸಿದ ಸಾರಥಿ, ಕಾಳಜಿಯಿಂದ ಎರಡು ಸುತ್ತು ಹಾಕಿ ಮುದ ನೀಡುವ ಮೋಜುಗಾರ ನನ್ನ ಅಪ್ಪ.



**ಮಾತನಾಡೋಣ ಬನ್ನಿ.**

1) ನಿಮ್ಮ ತಾಯಿ ಯಾವ ಯಾವ ಕೆಲಸಗಳನ್ನು ಮಾಡುತ್ತಾಳೆ?

2) ಪಾಲಕರಿಗೆ ನೀವು ಯಾವ ಯಾವ ಕೆಲಸಗಳಲ್ಲಿ ಸಹಾಯ ಮಾಡುತ್ತೀರಿ?

**ಕೆಳಗೆ ಕೊಟ್ಟ ಶಬ್ದಗಳನ್ನು ಸರಿಪಡಿಸಿ ಬರೆ.**

ಅ) ತ ಸ್ನೇ ಹಿ – ......... ಆ) ಸ ರಿ ವಾ – .........

**ಉದಾಹರಣೆಯಲ್ಲಿ ತೋರಿಸಿದಂತೆ ಸರಿಯಾದ ಜೋಡಿ ಮಾಡು.**

| | |
|---|---|
| ಅ) ಅಪ್ಪ | ದೊಡ್ಡಮ್ಮ |
| ಆ) ಅಜ್ಜಿ | ಅತ್ತೆ |
| ಇ) ದೊಡ್ಡಪ್ಪ | ಅಜ್ಜ |
| ಈ) ಮಾವ | ಅಮ್ಮ |

**ಬಿಟ್ಟ ಸ್ಥಳದಲ್ಲಿ ಕಂಸದಲ್ಲಿಯ ಯೋಗ್ಯ ಶಬ್ದ ತುಂಬಿ ವಾಕ್ಯ ಪೂರ್ಣ ಮಾಡು.**

ಅ) ನನ್ನ ತಂದೆಯೇ ನನ್ನ ಮೊದಲ ........... (ಶತ್ರು, ಗುರು, ಸ್ನೇಹಿತ)

ಆ) ಅಪ್ಪ ಪ್ರತಿ ಹಬ್ಬಕ್ಕೆ ನನಗೆ ........... ತರುವನು.

(ಬಣ್ಣ ಬಣ್ಣದ ಹೂವು, ಬಣ್ಣ ಬಣ್ಣದ ಬಟ್ಟೆ, ಬಣ್ಣ ಬಣ್ಣದ ಆಟಿಕೆ)

**ವಿಜಾತಿ ಒತ್ತುಗಳನ್ನು ಹೊಂದಿರುವ ಶಬ್ದಗಳನ್ನು ಹುಡುಕಿ ಬರೆ.**

ಉದಾ. ಮಿತ್ರ

.................... .................... ....................

- **ಕೊಟ್ಟ ಪರಿಚ್ಛೇದವನ್ನು ಓದಿ ಪ್ರಶ್ನೆಗಳಿಗೆ ಉತ್ತರ ಹೇಳು.**

ಅಪ್ಪ ಪ್ರತಿ ಹಬ್ಬಕ್ಕೆ ನನಗೆ ತರುವನು ಬಣ್ಣ ಬಣ್ಣದ ಬಟ್ಟೆ. ಹುಟ್ಟು ಹಬ್ಬದ ಖುಷಿಯಿಂದ ಎಲ್ಲರಿಗೂ ನೀಡುವನು ಔತಣ. ಬೈಕಿನ ಮೇಲೆ ನನ್ನದೇ ಹೆಸರು ಹಾಕಿಸಿದ ಸಾರಥಿ.

1) ಅಪ್ಪ ಎಂತಹ ಬಟ್ಟೆ ತರುವನು?

2) ಅಪ್ಪ ಔತಣ ಯಾವಾಗ ನೀಡುವನು?

- **ನಿಮ್ಮ ಕುಟುಂಬದಲ್ಲಿಯ ಸದಸ್ಯರ ಛಾಯಾಚಿತ್ರ ಅಂಟಿಸು.**



**ಸೂಚನೆ :** ಪಾಠವನ್ನು ಓದಿರಿ, ಓದಿಸಿಕೊಳ್ಳಿರಿ. ಕೊಟ್ಟ ಕೃತಿಗಳನ್ನು ಪೂರ್ಣ ಮಾಡಲು ಮಕ್ಕಳಿಗೆ ಮಾರ್ಗದರ್ಶನ ಮಾಡಿರಿ. ಮಕ್ಕಳು ತಮ್ಮ ತಂದೆಯ ಕುರಿತು ಅವರ ಅನುಭವ ಹಂಚಿಕೊಳ್ಳಲು ಅವಕಾಶ ಮಾಡಿಕೊಡಿರಿ. ಕುಟುಂಬದವರ ಚಿತ್ರಗಳನ್ನು ಅಂಟಿಸಲು ಹೇಳಿರಿ. ಕೃತಿಯನ್ನು ಪೂರ್ಣಮಾಡಿಕೊಂಡು ಬಂದ ಮಕ್ಕಳನ್ನು ಪ್ರೋತ್ಸಾಹಿಸಿ ಉಳಿದವರಿಗೂ ಪೂರ್ಣ ಮಾಡಲು ಹೇಳಿರಿ.

# 4. ಕಾಮನಬಿಲ್ಲು ಕಮಾನು ಕಟ್ಟಿದೆ

ಕಾಮನಬಿಲ್ಲು ಕಮಾನು ಕಟ್ಟಿದೆ
ಮೋಡದ ನಾಡಿನ ಬಾಗಿಲಿಗೆ !

ಬಣ್ಣಗಳೇಳನು ತೋರಣ ಮಾಡಿದೆ
ಕಂದನ ಕಣ್ಣಿಗೆ ಚಂದನ ಮಾಡಿದೆ;

ಹಣ್ಣಿನ ಹೂವಿನ ಹೊನ್ನನು ಕೂಡಿದೆ;
ಮಕ್ಕಳಿಗೋಕುಳಿಯಾಟವನಾಡಿದೆ

ತೆಂಗಿನ ತೋಟದ ಬುಡದಲಿ ಮೂಡಿದೆ
ಭೂಮಿಗೆ ಬಾನಿಗೆ ಸೇತುವೆ ಹೂಡಿದೆ

ಕಾಮನಬಿಲ್ಲು ಕಮಾನು ಕಟ್ಟಿದೆ
ಮೋಡದ ನಾಡಿನ ಬಾಗಿಲಿಗೆ

– ಕುವೆಂಪು





## ಮಾತನಾಡೋಣ ಬನ್ನಿ.

1) ನೀವು ಕಾಮನಬಿಲ್ಲನ್ನು ಎಲ್ಲಿ ನೋಡಿದ್ದಿರಿ?

2) ಕಾಮನಬಿಲ್ಲು ಯಾವಾಗ ಕಾಣಿಸುತ್ತದೆ?

## ◈ ಶಬ್ದಗಳ ಅರ್ಥ ಹೇಳು:

1) ಬಾನು - 2) ಹೊನ್ನು -



## ಕಾಮನಬಿಲ್ಲಿನಲ್ಲಿಯ ಬಣ್ಣಗಳ ಹೆಸರುಗಳನ್ನು ಬರೆ.

________ ________ ________

________ ________ ________

________

## ◈ ಕೊಟ್ಟ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರಿಸು.

1) ಮೋಡದ ನಾಡಿನ ಬಾಗಿಲಿಗೆ ಏನು ಕಟ್ಟಿದೆ?

ಉ: ________________

2) ತೋರಣವನ್ನು ಹೇಗೆ ಮಾಡಿದೆ?

ಉ: ________________

3) ಸೇತುವೆ ಎಲ್ಲಿ ಹೂಡಿದೆ?

ಉ: ________________

## ◈ ಕೆಳಗಿನ ಕವಿತೆಯ ಸಾಲುಗಳನ್ನು ಪೂರ್ಣಗೊಳಿಸು.

ಹಣ್ಣಿನ ________ ________ ________

________ ________ ಆಟವನಾಡಿದೆ.

**ಉದಾಹರಣೆಯಂತೆ ಕೆಳಗಿನ ಶಬ್ದಗಳನ್ನು ಸ್ವರ ಮತ್ತು ವ್ಯಂಜನಗಳ ರೂಪದಲ್ಲಿ ವಿಂಗಡಿಸು.**

ಉದಾ:-

ಬಾನಿಗೆ = ಬ್+ಆ+ನ್+ಇ+ಗ್+ಎ

ಕೂಡಿದೆ = ಕ್+ಊ+ಡ್+ಇ+ದ್+ಎ

ಮೂಡಿದೆ =

ಚಂದನ =

ಕಮಾನು =

ಸೇತುವೆ =

ಮೋಡದ =

**ಸೂಚನೆ :** ಪದ್ಯವನ್ನು ಸಾಭಿನಯದೊಂದಿಗೆ ಲಯಬದ್ಧವಾಗಿ ಹಾಡಿರಿ ಹಾಗೂ ಮಕ್ಕಳಿಂದ ಹಾಡಿಸಿಕೊಳ್ಳಿರಿ.



**ಒಂದೇ ಬಣ್ಣದ ಮನೆಯ ಅಕ್ಷರಗಳನ್ನು ಸೇರಿಸಿ ಅರ್ಥ ಪೂರ್ಣ ಶಬ್ದಗಳನ್ನು ಬರೆ**

| | | | | | | | |
|---|---|---|---|---|---|---|---|
| ಸ | ರ | ಛ | ಲ | ಠ | ಪಾ | ರಿ | ಪ |
| ಚ | ಳಿ | ಕ್ಕ | ಚಾ | ರ | ಯಂ | ತಿ | ತ |
| ಗಾ | ಮಾ | ಲ | ಲ | ಜ | ಪಾ | ಖ | ಚಿ |
| ಸ | ಪಾ | ಉ | ದಾ | ತ | ಉ | ಯ | ಮು |
| ಟ | ರ | ಅ | ನ್ನ | ಣಿ | ತ್ತ | ರ | ತು |
| ತ್ತ | ಪ್ರಾ | ಪ | ಕ | ನೆ | ತ | ಗೆ | ಪ |
| ಎ | ಳಿ | ರಾ | ಧ | ಚಿ | ಣ | ಡು | ರಿ |
| ಗಾ | ಆ | ಸ | ಉ | ರೆ | ಗ | ಅ | ಝು |

| | | |
|---|---|---|
| ಉದಾ:- ಪ್ರಾಣಿ | | |
| | | |
| | | |
| | | |
| | | |
| | | |
| | | |
| | | |

**ಸೂಚನೆ :** ಬಣ್ಣಗಳ ಪರಿಚಯ ಹಾಗೂ ಶಬ್ದಗಳನ್ನು ತಯಾರಿಸಲು ಅವರಲ್ಲಿ ಉತ್ಸಾಹದ ವಾತಾವರಣ ನಿರ್ಮಾಣ ಮಾಡಿ ಶಬ್ದಗಳನ್ನು ಬರೆಯಲು ಮಾರ್ಗದರ್ಶನ ಮಾಡಿರಿ.

**ಬಾಗಿಲಿಗೆ ತೋರಣ ಚಂದ, ಬಾನಿಗೆ ಕಾಮನಬಿಲ್ಲು ಅಂದ**

# 5. ರಕ್ಷಾಬಂಧನ





ನಮ್ಮ ದೇಶ ಭಾರತ, ವಿವಿಧತೆಗಳ ನಾಡು, ಸೊಗಡಿನ ಬೀಡು. ಇಲ್ಲಿ ಪ್ರತಿಯೊಂದು ಹಬ್ಬವನ್ನು ಸಡಗರದಿಂದ ಆಚರಿಸುತ್ತಾರೆ. ಶ್ರಾವಣ ಮಾಸವೆಂದರೆ ಹಬ್ಬಗಳ ಪರ್ವ. ಈ ಮಾಸದಲ್ಲಿ ಬರುವ ಹಬ್ಬ ರಕ್ಷಾಬಂಧನ, ಅಕ್ಕ-ತಮ್ಮ, ಅಣ್ಣ-ತಂಗಿಯರ ನಡುವಿನ ಬಾಂಧವ್ಯ ಬೆಳೆಸುವ ಹಬ್ಬವೇ ರಕ್ಷಾಬಂಧನ.



ರಕ್ಷಾಬಂಧನ ಹಬ್ಬ ನೂಲು ಹುಣ್ಣಿಮೆಯ ದಿನದಂದು ಬರುತ್ತದೆ. ಈ ಹಬ್ಬವನ್ನು ದೇಶದ ತುಂಬ ಸಂಭ್ರಮದಿಂದ ಆಚರಿಸಲಾಗುತ್ತದೆ. ಈ ಹಬ್ಬ ಸಹೋದರ – ಸಹೋದರಿಯರ ನಡುವಿನ ಪ್ರೀತಿ, ಕಾಳಜಿಯನ್ನು ತೋರಿಸುವದು.

ಹಬ್ಬದ ದಿವಸ ಹೊಸ ಬಟ್ಟೆ ತೊಡುವರು. ಸಹೋದರಿಯರು ಸಹೋದರರಿಗೆ ಆರತಿ ಬೆಳಗುವರು. ಅವರ ಕೈಗೆ ಪವಿತ್ರ ರಾಖಿ ಕಟ್ಟುವರು. ಸಹೋದರರು ಅವರಿಗೆ ಉಡುಗೊರೆ ಕೊಡುವರು. ಉಡುಗೊರೆಯನ್ನು ಪಡೆದು ಸಹೋದರಿಯರು ಶುಭ ಹಾರೈಸುವರು. ಒಬ್ಬರಿಗೊಬ್ಬರು ಸಿಹಿ ತಿನಿಸಿ ಸಂಭ್ರಮಿಸುವರು. ರಾಖಿ ಕಟ್ಟಿಸಿಕೊಂಡ ಸಹೋದರರು ಸಹೋದರಿಯರ ರಕ್ಷಣೆಯ ಹೊಣೆ ಹೊರುವರು.

ಈ ಹಬ್ಬವು ಅಕ್ಕ-ತಮ್ಮ, ಅಣ್ಣ-ತಂಗಿಯ ನಡುವೆ ಪ್ರೀತಿ, ವಿಶ್ವಾಸ ಹೆಚ್ಚಿಸುವುದು. ಅವರ ನಡುವೆ ಕಾಳಜಿಯ ಬಾಂಧವ್ಯ ಬಲಪಡಿಸುವುದು. ಈ ಹಬ್ಬ ಸ್ನೇಹಿತರ ನಡುವಿನ ಸ್ನೇಹವನ್ನು ಸೂಚಿಸುತ್ತದೆ. ಈ ಹಬ್ಬವು ಎಲ್ಲ ಸಮುದಾಯದವರನ್ನು ಹತ್ತಿರ ತರುವದು.

**ಸೂಚನೆ :** ಶಿಕ್ಷಕರು ಪಾಠದ ಸಹಭಾಗಿ ವಾಚನ ಮಾಡಿಸಿಕೊಳ್ಳಿರಿ.



## ಮಾತನಾಡೋಣ ಬನ್ನಿ.

1) ನಿನಗೆ ಯಾವ ಹಬ್ಬ ಇಷ್ಟ?

2) ನಿಮ್ಮ ಮನೆಯಲ್ಲಿ ರಕ್ಷಾಬಂಧನ ಹೇಗೆ ಆಚರಣೆ ಮಾಡುತ್ತೀರಿ?

3) ನಿಮಗೆ ಗುರುತಿರುವ ಬೇರೆ ಬೇರೆ ಹಬ್ಬಗಳ ಹೆಸರು ಹೇಳಿರಿ

## ❖ ಉದಾಹರಣೆಯಲ್ಲಿ ತೋರಿಸಿದಂತೆ ಹೊಂದಿಸು

| | | |
|---|---|---|
| 1) ದೀಪಗಳ ಹಬ್ಬ. |  | ಕ್ರಿಸಮಸ್ |
| 2) ಬಣ್ಣಗಳ ಹಬ್ಬ. |  | ಯುಗಾದಿ |
| 3) ಗಣೇಶ ಬರುವನು ಮನೆಗೆ. |  | ಹೋಳಿ |
| 4) ಎಳ್ಳು ಬೆಲ್ಲ ಹಂಚೋಣ. |  | ರಮಜಾನ |
| 5) ಬನ್ನಿರಿ ಬಂಗಾರ ಹಂಚೋಣ. |  | ಸಂಕ್ರಾಂತಿ |
| 6) ಬೇವು ಬೆಲ್ಲದ ಸಮರಸ. ಒಂದು ಹೊಸ ವರುಷ. |  | ಗಣಪತಿ ಹಬ್ಬ |
| 7) ಗೆಳೆಯನ ಮನೆಗೆ ಹೋಗೋಣ ಶಿರಕುರ್ಮಾ ಕುಡಿಯೋಣ |  | ದೀಪಾವಳಿ |
| 8) ಮಕ್ಕಳಿಗೆ ಆಟಿಗೆ ತಿಂಡಿ ತಂದಿಹನು ಸಾಂತಾಕ್ಲೋಸ್. |  | ದಸರಾ |

## ❖ ನೀವು ನಿಮ್ಮ ಮನೆಯಲ್ಲಿ ಕಾಗದದಿಂದ ರಾಖಿಯನ್ನು ಹೇಗೆ ತಯಾರು ಮಾಡುವಿರಿ ಎಂಬುದನ್ನು ಬರೆಯಿರಿ.

**ಸೂಚನೆ :** ಮೇಲಿನ ಕೃತಿಯನ್ನು ಪೂರ್ಣಮಾಡಲು ಸಹಾಯ ಮಾಡಿರಿ.

# 6. ಆಡೋಣ ಬಾ

ಆಡೋಣ ಬಾ ನಾವು ಕುಣಿಯೋಣ ಬಾ
ಆಟ ಆಡೋಣ ಬಾ ಕೂಡಿ ನಲಿಯೋಣ ಬಾ ॥ ಪ ॥

ಕುಂಟೆಬಿಲ್ಲೆ ಆಡುವಾಗ ಕಾಲು ಊರಬೇಡ
ಆಯತಪ್ಪಿ ಆಟದಿಂದ ದೂರ ಆಗಬೇಡ
ಆಡೋಣ ಬಾ...

ಲೋ ಲೋ ಟುಮ್ಮಯ್ಯ ಎನುತ ಹಾಕು ಸುತ್ತು
ಮೈ ಮರೆತ ತಿಮ್ಮಯ್ಯ ಓಡಿ ಓಡಿ ಸುಸ್ತು
ಆಡೋಣ ಬಾ...



ಆಡು ನೀ ಲಗೋರಿ ಏರಿಸು ನೀ ಹಂತವ
ಆಡಿಸು ನೀ ಬುಗುರಿ ತಿರುಗಿಸು ನೀ ಸುತ್ತವ
ಆಡೋಣ ಬಾ...

ಸೋಲು ಗೆಲುವಿಗಿಲ್ಲವಲ್ಲ ಮಹತ್ವ
ಬೆಳೆದು ಬರಲಿ ಎಲ್ಲರಲಿ ಸ್ನೇಹ ಸೋದರತ್ವ
ಆಡೋಣ ಬಾ...





**ಸೂಚನೆ :** ಶಿಕ್ಷಕರು ಮಕ್ಕಳಿಗೆ ಸಾಭಿನಯ ಮತ್ತು ರಾಗಬದ್ಧವಾಗಿ ಹಾಡನ್ನು ಹಾಡಲು ಪ್ರೇರೇಪಿಸಬೇಕು. ಜೊತೆಗೆ ಹಾವಭಾವ ಇರಲಿ. ಮಕ್ಕಳಿಗೆ ಅವರು ಯಾವ ಯಾವ ಆಟವನ್ನು ಆಡುತ್ತಾರೆ ಹೇಳಲು ಪ್ರೇರೇಪಿಸಿರಿ. ವೈಯಕ್ತಿಕ ಆಟ ಮತ್ತು ಸಾಂಘಿಕ ಆಟದ ಬಗ್ಗೆ ಮಕ್ಕಳಿಗೆ ಮಾಹಿತಿ ಹೇಳಿರಿ.



**ಮಾತನಾಡೋಣ ಬನ್ನಿ :**

1) ನಿಮಗೆ ಗೊತ್ತಿರುವ ಆಟಗಳು ಯಾವವು?

2) ನಿನಗೆ ಇಷ್ಟವಾದ ಆಟದ ನಿಯಮಗಳನ್ನು ಹೇಳಿರಿ.



**ಉದಾಹರಣೆಯಲ್ಲಿ ತೋರಿಸಿದಂತೆ ಪದಗಳನ್ನು ಜೋಡಿಸು**

| | |
|---|---|
| ಕುಣಿಯೋಣ | ಮುಟ್ಟಿ |
| ತಿಮ್ಮಯ್ಯ | ಆಗಬೇಡ |
| ಜಟ್ಟಿ | ನಲಿಯೋಣ |
| ಲಗೋರಿ | ಸೋದರತ್ವ |
| ಊರಬೇಡ | ಬುಗುರಿ |
| ಮಹತ್ವ | ಟುಮ್ಮಯ್ಯ |

**ಚಿತ್ರ ನೋಡಿ ಪಾರಂಪರಿಕ ಆಟಗಳ ಹೆಸರು ಬರೆ**













**ಸೂಚನೆ :** ಪಾರಂಪರಿಕ ಆಟಗಳ ಬಗ್ಗೆ ಚರ್ಚಿಸಿರಿ. ಮಕ್ಕಳಿಗೆ ಗೊತ್ತಿರುವ ಆಟಗಳ ಮಾಹಿತಿ ಬರೆಯಲು ಅವರನ್ನು ಪ್ರೋತ್ಸಾಹಿಸಿರಿ.



## ಏನು ಮಾಡುತ್ತಿದ್ದಾರೆ ?






---------------------- | ---------------------- | ---------------------- | ----------------------







---------------------- | ---------------------- | ---------------------- | ----------------------







---------------------- | ---------------------- | ---------------------- | ----------------------

**ಸೂಚನೆ :** ಮಕ್ಕಳಿಗೆ ಚಿತ್ರಗಳ ನಿರೀಕ್ಷಣೆಯನ್ನು ಮಾಡಿ, ಕ್ರಿಯೆಗಳನ್ನು ಗುರುತಿಸಿ ಬರೆಯಲು ಮಾರ್ಗದರ್ಶನ ಮಾಡಿರಿ. ಇದೇ ರೀತಿಯ ಬೇರೆ ಬೇರೆ ಚಿತ್ರಗಳನ್ನು ತೋರಿಸಿ ಆ ಚಿತ್ರಗಳಲ್ಲಿಯ ಕ್ರಿಯೆಗಳ ಬಗ್ಗೆ ಮಕ್ಕಳಿಗೆ ಕೇಳಿರಿ.ಉದಾ– ಓಡುವ, ಜಿಗಿಯುವ, ಹಾರುವ, ಈಜಾಡುವ ಇತ್ಯಾದಿ. ಗ್ರಂಥಾಲಯದ ಪುಸ್ತಕಗಳಿಂದ ವಿವಿಧ ಆಟಗಳ ಮಾಹಿತಿ ಪಡೆಯಲು ಮಕ್ಕಳಿಗೆ ಸಹಾಯ ಮಾಡಿರಿ.

**ಆಟ ಆಡು, ಪಾಠ ಓದು**

# ಚಿತ್ರಕಥೆ - ಪ್ರಯತ್ನಕ್ಕೆ ಫಲ



**ಸೂಚನೆ :** ಮಕ್ಕಳಿಗೆ ಚಿತ್ರಗಳನ್ನು ಸೂಕ್ಷ್ಮವಾಗಿ ನಿರೀಕ್ಷಣೆ ಮಾಡಲು ಹೇಳಿರಿ. ಚಿತ್ರಗಳ ನಡುವಿನ ಸಂಬಂಧವನ್ನು ಗುರುತಿಸಲು ಹೇಳಿರಿ. ಚಿತ್ರದಲ್ಲಿ ಯಾರು ಕಾಣುತ್ತಿದ್ದಾರೆ? ವ್ಯಕ್ತಿ ಏಕೆ ಚಿಂತಿಸುತ್ತಿದ್ದಾನೆ? ಈ ರೀತಿಯ ಪ್ರಶ್ನೆಗಳನ್ನು ಕೇಳಿರಿ. ಮೇಲಿನ ಚಿತ್ರಗಳ ಸಹಾಯದಿಂದ ಕಥೆಯನ್ನು ಬರೆಯಲು ಹೇಳಿರಿ.

# 7. ವಿದ್ಯೆ ಕಲಿತು ಜಾಣನಾಗು

ಕೋಗಿಲೆ ತಾ ಮರದ ಮೇಲೆ
ಏಕೆ ಕುಳಿತಿದೆ?
ಕುಹೂ ಕುಹೂ ಹಾಡಿಕೊಳ್ಳಲು
ದನಿಯ ತೆಗೆದಿದೆ.
ಬೆಟ್ಟದಲ್ಲಿ ನವಿಲು ಏಕೆ
ಆಡಿ ಕುಣಿದಿದೆ?
ಗಿರಿಯನೇರಿ ಬರುವ ಜನಕೆ
ನೃತ್ಯ ತೋರಿದೆ.

ಕೋತಿಯೇಕೆ ಮರವನೇರಿ
ಹಲ್ಲು ಕಿಸಿದಿದೆ ?
ಹಣ್ಣು ಕಿತ್ತು ಎಸೆದು ಬಿಟ್ಟು
ಆಟವಾಡಿದೆ.
ಗಾಳಿಪಟವು ಮುಗಿಲಿನೊಳಗೆ
ಹೇಗೆ ಹಾರಿದೆ?
ಸೂತ್ರ ಹಿಡಿದು ಬಿಡಲು ಓಡಿ
ಕೈಯ ಜಗ್ಗಿದೆ.

– ಜೀನಹಳ್ಳಿ ಸಿದ್ದಲಿಂಗಪ್ಪ



**ಸೂಚನೆ :** ಚಿತ್ರದಲ್ಲಿ ಕಾಣುತ್ತಿರುವ ವಿವಿಧ ಪ್ರಾಣಿ-ಪಕ್ಷಿಗಳ ಹೆಸರು ಹೇಳಿ ಅವುಗಳನ್ನು ಗುರುತಿಸಲು ಹೇಳಿರಿ. ಗಾಳಿ ಪಟದ ಬಣ್ಣದ ಬಗ್ಗೆ ಮರದ ಬಣ್ಣದ ಬಗ್ಗೆ, ನವಿಲಿನ ಬಣ್ಣದ ಬಗ್ಗೆ ಪ್ರಶ್ನೆ ಕೇಳಿರಿ. ಪ್ರಾಸ ಪದಗಳ ಬಗ್ಗೆ ಇನ್ನಷ್ಟು ತಿಳಿಸಿಹೇಳಿರಿ.

## ಮಾತನಾಡೋಣ ಬನ್ನಿ.

1) ವಿದ್ಯೆ ಕಲಿತು ನೀವು ಮುಂದೆ ಏನಾಗಲು ಬಯಸುವಿರಿ?

2) ಪ್ರಾಣಿ/ಪಕ್ಷಿಗಳೂ ಶಾಲೆಗೆ ಹೋಗುತ್ತಿದ್ದರೆ?

3) ನೀವು ಯಾವ ಹಕ್ಕಿಯಾಗಲು ಬಯಸುವಿರಿ? ಏಕೆ?

## ನಾನು ಹೇಗೆ ಮಾತನಾಡುವೆ.

| ಪ್ರಾಣಿ / ಪಕ್ಷಿ | ಧ್ವನಿ |
|---|---|
| 1) ಕೋಗಿಲೆ | ಘರ್ಜಿಸುತ್ತದೆ |
| 2) ನಾಯಿ | ಗುಂಯಿಗುಟ್ಟುತ್ತದೆ |
| 3) ಕತ್ತೆ | ಕೂಗುತ್ತದೆ |
| 4) ಆನೆ | ಝೇಂಕರಿಸುತ್ತದೆ |
| 5) ಸಿಂಹ | ವಟಗುಟ್ಟುತ್ತದೆ |
| 6) ನೊಣ | ಘೀಳಿಡುತ್ತದೆ |
| 7) ಕಪ್ಪೆ | ಅರಚುತ್ತದೆ |
| 8) ದುಂಬಿ | ಬೊಗಳುತ್ತದೆ |

## ಪ್ರಾಸಯುಕ್ತ ಪದಗಳನ್ನು ಹುಡುಕಿ ಬರೆ.

ಉದಾ :- ನೋಡಿ – ಓಡಿ

---------------- ---------------- ----------------

---------------- ----------------

## ಕೊಟ್ಟ ಪದಗಳಿಗೆ ಪ್ರಾಸ ಪದ ಜೋಡಿಸಿರಿ.

ಉದಾ:- ಎಳೆದ – ಸೆಳೆದ

| ದೇಶ ______ | ನುಡಿ ______ | ಆಡಿದ ______ | ನಲಿ ______ | ಬಂದ ______ |
|---|---|---|---|---|

**ವಿದ್ಯೆಗೆ ವಿನಯವೇ ಭೂಷಣ**

## ಬಿಟ್ಟ ಸ್ಥಳದಲ್ಲಿ ಯೋಗ್ಯ ಶಬ್ದ ಬರೆ.

ನನ್ನ ಹೆಸರು ......................................................ಇದೆ. ನಾನು ಎರಡನೆಯ



ತರಗತಿಯಲ್ಲಿ ಕಲಿಯುತ್ತಿರುವೆ. ನಾನು ಬೇಗನೆ ಏಳುತ್ತೇನೆ. ದಿನಾಲು _______ ಮಾಡುತ್ತೇನೆ.





ತಂದೆ ತಾಯಿಗೆ __________ ಮಾಡುತ್ತೇನೆ. ದಿನಾಲು ___________ ಗೆ ಹೋಗುತ್ತೇನೆ.

ನನ್ನ ಶಾಲೆಯ ಹೆಸರು ............................................................... ಇದೆ.



ನನ್ನ ____________ ಹೆಸರು.......................................................... ಇದೆ.





ನನ್ನ ________ ಯ ಹೆಸರು.....................ಇದೆ, ಮತ್ತು ನನ್ನ _______ ಯ ಹೆಸರು



................................ ಇದೆ. ನನಗೆ ಒಬ್ಬಳು __________ ಇದ್ದಾಳೆ, ಅವಳ ಹೆಸರು

 

ಇದೆ. ನಮ್ಮ ಮನೆಯಲ್ಲಿ ನಮ್ಮ ಜೊತೆಗೆ __________ ಮತ್ತು __________ ವಾಸಿಸುತ್ತಾರೆ.

ಅಜ್ಜನ ಹೆಸರು.............. ಇದೆ. ಅಜ್ಜಿಯ ಹೆಸರು .............. ಇದೆ. ನಾನು

 

ದಿನಾಲು ____________ ಯಿಂದ ಮನೆಗೆ ಬಂದು. ______________ ತೊಳೆದುಕೊಂಡು,

 

ನಂತರ ____________ ದಲ್ಲಿ ಆಟ ಆಡಲು ಹೋಗುತ್ತೇನೆ. ಅಲ್ಲಿ ____________ ರೊಂದಿಗೆ



ಆಟ ಆಡುತ್ತೇನೆ. ಮನೆಗೆ ಬಂದು ______________ ಮಾಡುತ್ತೇನೆ ರಾತ್ರಿ ನಾವು ಎಲ್ಲರೂ

  

ಕೂಡಿಕೊಂಡು ___________ ಮಾಡುತ್ತೇವೆ. ____________ಬೇಗನೆ ___________ ತ್ತೇನೆ.

**ಸೂಚನೆ :** ಮಕ್ಕಳಿಗೆ ತಮ್ಮ ದಿನಚರಿಯನ್ನು ಹೇಳಲು ತಿಳಿಸಿರಿ. ಎಲ್ಲ ಮಕ್ಕಳಿಗೂ ಅವಕಾಶ ನೀಡಿ ಮಾರ್ಗದರ್ಶನ ಮಾಡಿರಿ.

**ಬೇಗ ಮಲಗು ಬೇಗ ಏಳು**

## ಚಿತ್ರ ನೋಡಿ ಕಥೆ ಪೂರ್ಣ ಮಾಡಿ ಹೇಳು. (ಚಿತ್ರ ಕಥೆ)




**ಸೂಚನೆ :** ವಿದ್ಯಾರ್ಥಿಗಳಿಗೆ ಚಿತ್ರ ನಿರೀಕ್ಷಣೆ ಮಾಡಲು ಹೇಳು, ಕಥೆಯ ಕೊನೆಯಲ್ಲಿ ಏನಾಗಿರಬಹುದು? ಎಂಬುದನ್ನು ಊಹಿಸಿ ಕಥೆ ಪೂರ್ಣ ಮಾಡಲು ಹೇಳಿರಿ. ಇಲ್ಲಿ ವಿದ್ಯಾರ್ಥಿಗಳ ವಿವಿಧ ಕಲ್ಪನೆಗಳ ಪ್ರತಿಕ್ರಿಯೆಗಳನ್ನು ಶಿಕ್ಷಕರು ಸ್ವೀಕರಿಸಬೇಕು. ಮಕ್ಕಳಿಗೆ ಗುರುತಿರುವ ಬೇರೆ ಬೇರೆ ಕಥೆಗಳನ್ನು ಹೇಳುವಂತೆ ಪ್ರೋತ್ಸಾಹಿಸಬೇಕು. ಗ್ರಂಥಾಲಯದಲ್ಲಿನ ಚಿತ್ರಕಥೆಗಳಿರುವ ಪುಸ್ತಕಗಳನ್ನು ಓದಿರಿ ಮಕ್ಕಳ ನಿಯತ ಕಾಲಿಕೆಗಳನ್ನು (ಉದಾ. ಚಂಪಕ, ಚಂದಾಮಾಮ ಇತ್ಯಾದಿ) ಒದಗಿಸಿ ಓದಲು ಪ್ರೋತ್ಸಾಹಿಸಿರಿ.

# 8. ಜೋಳ ಯಾರು ಬಿತ್ತುವಿರಿ?

ಒಂದು ಕೋಳಿ ಇತ್ತು. ನಾಯಿ, ಬೆಕ್ಕು ಮತ್ತು ಬಾತುಕೋಳಿ ಅದರ ಗೆಳೆಯರಾಗಿದ್ದರು. ಒಂದು ದಿನ ಕೋಳಿ ಅಂಗಳದಲ್ಲಿ ತಿರುಗಾಡುತ್ತಿತ್ತು.



ಅದಕ್ಕೆ ಕೆಲವು ಜೋಳದ ಕಾಳುಗಳು ಕಾಣಿಸಿದವು. ಕೋಳಿಗೆ ಒಂದು ಯೋಚನೆ ಹೊಳೆಯಿತು. ಜೋಳದ ಕಾಳುಗಳನ್ನು ಬಿತ್ತಿದರೆ ಹೇಗೆ? ಅದು ಕಾಳುಗಳನ್ನು ತೆಗೆದುಕೊಂಡು ಗೆಳೆಯರ ಹತ್ತಿರ ಹೋಯಿತು. ''ಜೋಳ ಯಾರು ಬಿತ್ತುವಿರಿ''? ಎಂದು ಕೇಳಿತು ನಾಯಿ, ಬೆಕ್ಕು, ಬಾತುಕೋಳಿ ಹೇಳಿದವು ''ನಮಗೆ ಬಿತ್ತಲು ಬರುವುದಿಲ್ಲ''

ಸರಿ ಹಾಗಾದರೆ ನಾನೇ ಬಿತ್ತುತ್ತೇನೆ'' ಎಂದಿತು ಕೋಳಿ. ಆಕೆ ಒಬ್ಬಳೇ ಜೋಳ ಬಿತ್ತಿದಳು.





ಕಾಲ ಕಳೆದಂತೆ ಜೋಳ ಬೆಳೆಯಿತು.

''ಜೋಳವನ್ನು ಯಾರು ಕೊಯ್ಯುವಿರಿ?'' ಎಂದು ಕೋಳಿ ನಾಯಿ, ಬೆಕ್ಕು, ಬಾತುಕೋಳಿಗೆ ಕೇಳಿತು. ಅವು ಮೂರೂ ''ನಮಗೆ ಬರುವುದಿಲ್ಲವೆಂದು ಹೇಳಿದಾಗ ಅದು ಜೋಳದ ತೆನೆಗಳನ್ನು ಕೊಯ್ದು ಒಣಗಿಸಿತು''.

ನಂತರ ತೆನೆ ಮುರಿಯುವುದು, ರಾಶಿ ಮಾಡುವುದು, ಹಿಟ್ಟು ಮಾಡುವುದು ಈ ಕೆಲಸಗಳನ್ನು ಯಾರು ಯಾರು ಮಾಡುವಿರಿ? ಎಂದು ಕೇಳಿತು. ಆಗ ನಾಯಿ, ಬೆಕ್ಕು, ಬಾತುಕೋಳಿ ಈ ಮೂವರು ಗೆಳೆಯರು ನಮಗೆ ಈ ಕೆಲಸಗಳು ಬರುವುದಿಲ್ಲ ಎಂದು ಹೇಳಿ ಕೆಲಸಕ್ಕೆ ಮುಂದೆ ಬರಲಿಲ್ಲ ಎಲ್ಲವನ್ನು ಕೋಳಿಯೇ ಮಾಡಿತು.





ಇದೇ ರೀತಿ ಕೊನೆಗೆ ರೊಟ್ಟಿ ಯಾರು ಮಾಡುವಿರಿ? ಎಂದು ಕೇಳಿದಾಗಲೂ ಕೂಡಾ ಗೆಳೆಯರು ಮುಂದೆ ಬರಲಿಲ್ಲ. ಆಗ ಕೋಳಿ ರೊಟ್ಟಿಯನ್ನೂ ತಾನೆ ಮಾಡಿದಳು. ರೊಟ್ಟಿಯನ್ನು ಯಾರು ತಿನ್ನುವಿರಿ? ಎಂದು ಕೇಳಿದಳು.

ನಾಯಿ, ಬೆಕ್ಕು, ಬಾತುಕೋಳಿ ''ನಾನು ತಿನ್ನುವೆ, ನಾನು ತಿನ್ನುವೆ'', ಎಂದು ಮುಂದೆ ಬಂದವು

ಆಹಾ...ಹಾ! ''ನೀವು ಯಾವ ಕೆಲಸಕ್ಕೂ ಬರಲಿಲ್ಲ ಬರಿ ನೆಪ ಹೇಳಿದಿರಿ'' ರೊಟ್ಟಿ ತಿನ್ನಲು ಹೇಗೆ ಬರುತ್ತದೆ? ಎಲ್ಲ ಕೆಲಸ ನಾನೊಬ್ಬಳೇ ಮಾಡಿದ್ದೇನೆ ''ನನ್ನ ಮರಿಗಳ ಜೊತೆ ತಿನ್ನುತ್ತೇನೆ'' ಎಂದಿತು ಕೋಳಿ ಮತ್ತು ಮರಿಗಳ ಜೊತೆ ರೊಟ್ಟಿಯನ್ನು ಹಂಚಿಕೊಂಡು ತಿಂದಿತು.





**ಮಾತನಾಡೋಣ ಬನ್ನಿ.**

1) ನೀನು ಕೋಳಿಯಾಗಿದ್ದರೆ ಏನು ಮಾಡುತ್ತಿದ್ದೆ?

2) ನಾಯಿ, ಬೆಕ್ಕು ಮತ್ತು ಬಾತುಕೋಳಿ ಸಹಾಯ ಮಾಡಿದ್ದರೆ ಈ ಕಥೆ ಏನು ಆಗುತ್ತಿತ್ತು?



**ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ಕೋಳಿಗೆ ಅಂಗಳದಲ್ಲಿ ಏನು ಕಾಣಿಸಿದವು?

________________________________________

________________________________________

2.ಕೋಳಿ ತನ್ನ ಗೆಳೆಯರ ಹತ್ತಿರ ಯಾವ ಯಾವ ಪ್ರಶ್ನೆ ಕೇಳಿತು?

________________________________________

________________________________________

3. ಕೊನೆಗೆ ಕೋಳಿ ರೊಟ್ಟಿಯನ್ನು ಯಾರ ಜೊತೆಗೆ ಹಂಚಿಕೊಂಡು ತಿಂದಿತು?

________________________________________

________________________________________

❖ **ನಿಮಗೆ ಗೊತ್ತಿರುವ ಧಾನ್ಯಗಳ ಹೆಸರುಗಳ ಪಟ್ಟಿ ಮಾಡು**

❖ **ನಿನ್ನ ಅಮ್ಮ ದೋಸೆಯನ್ನು ಹೇಗೆ ತಯಾರಿಸುತ್ತಾರೆ ಎಂಬುವ ಕೃತಿಯನ್ನು ವರ್ಗದಲ್ಲಿ ವಿದ್ಯಾರ್ಥಿಗಳಿಂದ ಹೇಳಿಸಿಕೊಳ್ಳಿರಿ.**



**ನಾಟಕ ರೂಪಾಂತರ**

''ಮಕ್ಕಳನ್ನು ನಾಲ್ಕು ಗುಂಪುಗಳಾಗಿ ಮಾಡಿ, ಕೋಳಿ, ನಾಯಿ, ಬೆಕ್ಕು, ಬಾತುಕೋಳಿಯ ಪಾತ್ರಗಳನ್ನು ಓದಿ ಅಭಿನಯಿಸಲು ಹೇಳಿ''.

❖ **ಕೊಟ್ಟ ಪರಿಚ್ಛೇದವನ್ನು ಓದಿ ಪ್ರಶ್ನೆಗಳಿಗೆ ಉತ್ತರ ಹೇಳು.**

ಕಾಲ ಕಳೆದಂತೆ ಜೋಳ ಬೆಳೆಯಿತು. ಜೋಳವನ್ನು ಯಾರು ಕೊಯ್ಯುವಿರಿ? ಎಂದು ಕೋಳಿ, ನಾಯಿ, ಬೆಕ್ಕು, ಬಾತುಕೋಳಿಗೆ ಕೇಳಿತು. ಅವು ಮೂರು ''ನಮಗೆ ಬರುವುದಿಲ್ಲ'' ಎಂದು ಹೇಳಿದಾಗ ಅದು ಜೋಳದ ತೆನೆಗಳನ್ನು ಕೊಯ್ದು ಒಣಗಿಸಿತು.

1) 'ಜೋಳವನ್ನು ಯಾರು ಕೊಯ್ಯುವಿರಿ?' ಎಂದು ಕೋಳಿ ಯಾರಿಗೆ ಕೇಳಿತು?

2) ಜೋಳದ ತೆನೆಗಳನ್ನು ಯಾರು ಕೊಯ್ದರು?



## ಚಿತ್ರಗಳಿಗೆ ಯೋಗ್ಯ ಕ್ರಮ ಕೊಡು.


-------------------------------


-------------------------------


-------------------------------


-------------------------------


-------------------------------

ಏನಿದು ಚಿತ್ರ, ಇವನ ಸುತ್ತ?

ಪ್ರಶ್ನೆ ಚಿಹ್ನೆ ಬಳಸು

ಉದಾಹರಣೆಯಂತೆ ಪ್ರಶ್ನೆಗಳನ್ನು ತಯಾರಿಸು.

ಯಾವುದು?

ಏಕೆ?

ಎಷ್ಟು ?

ಏನು?

ಯಾವಾಗ?

ಎಲ್ಲಿ?

ಹೇಗೆ?

ಯಾರು?



ಉದಾ: ನಿನ್ನ ಹೆಸರು ಏನು?

-------------------------------

-------------------------------

-------------------------------

-------------------------------

**ಸೂಚನೆ :** ಪ್ರಸ್ತುತ ಪಾಠವನ್ನು ಮಕ್ಕಳಿಂದ ನಾಟಕ ರೂಪದಲ್ಲಿ ಸಾದರಪಡಿಸಿಕೊಳ್ಳಿ. ಪ್ರಾಣಿಗಳು ವರ್ತಿಸಿದ ರೀತಿ ಸರಿಯೋ ? ತಪ್ಪು? ಅಂತ ಕೇಳಿ, ಉತ್ತರ ಯಾವುದೇ ನೀಡಿದರು ಯಾಕೆ? ಅಂತ ಮರು ಪ್ರಶ್ನೆ ಹಾಕಿ ಉತ್ತರಿಸುವಂತೆ ಪ್ರೇರೇಪಿಸಿರಿ.

**ಆಳಾಗಿ ದುಡಿ, ಅರಸನಾಗಿ ಉಣ್ಣು**

# 9. ಉಪಕಾರ







ಕುರಿಕಾಯುವವನೊಬ್ಬ ಬೆಟ್ಟದ ಮೇಲೆ ಕುರಿಗಳನ್ನು ಮೇಯಿಸುತ್ತಿದ್ದನು. ಆಗ ಕುರಿಗಳು ಒಮ್ಮೆಲೆ **ಬ್ಯಾಽ... ಬ್ಯಾಽ** ಎಂದವು. ಕುರಿಕಾಯುವವನಿಗೆ ಫಕ್ಕನೆ ಆ ಕಡೆ ನೋಡಿದ. ಅಲ್ಲಿ ಒಂದು ಹದ್ದು ಬಲೆಯಲ್ಲಿ ಸಿಕ್ಕಿ ಬಿದ್ದಿತ್ತು.

ಅದನ್ನು ಕಂಡ ಕುರಿಕಾಯುವವನಿಗೆ ಕರುಣೆ ಬಂದಿತು. ತಕ್ಷಣ ಹದ್ದನ್ನು ಬಲೆಯಿಂದ ಬಿಡಿಸಿದ. ಆ ಹದ್ದು ಆನಂದದಿಂದ



**ಸುಂಯ್**ಽಽ... ಎಂದು ಹಾರಿಹೋಯಿತು.

ಒಂದು ಸಲ ಆ ಕುರಿಕಾಯುವವನಿಗೆ ಕುರಿಗಳನ್ನು ಮೇಯಿಸುವಾಗ ನಿದ್ರೆ ಬಂದಿತು. ಆತ ಅಲ್ಲಿರುವ ಬಂಡೆಗೆ ಆನಿಸಿ ಕುಳಿತನು **ಗುರ್ರ**ಽಽ... **ಗುರ್ರ**ಽಽ... ಎಂದು ಗೊರಕೆ ಹೊಡೆಯ ತೊಡಗಿದನು. ಅವನು ಬಂಡೆ ಬೆಟ್ಟದ ಕಣಿವೆಗೆ ವಾಲಿರುವದನ್ನು ನೋಡಿರಲಿಲ್ಲ. ಇದನ್ನು ಆ ಹದ್ದು ನೋಡಿತು. ತಕ್ಷಣ ಹದ್ದು ಭರ್ರನೆ ಹಾರಿ ಬಂದಿತು.





ಕುರಿಕಾಯುವವನ ಮುಂಡಾಸನ್ನು ಥಟ್ಟನೆ ಎತ್ತಿಕೊಂಡು ಹೋಯಿತು.

ಅವನಿಗೆ ಫಕ್ಕನೆ ಎಚ್ಚರವಾಯಿತು. ಅವನಿಗೆ ತುಂಬಾ ಕೋಪ ಬಂತು. ಕೋಪದಲ್ಲಿ ಹದ್ದಿನ ಹಿಂದೆಯೇ ಹಾಽಽ.. ಹಾಽಽ.. ಎನ್ನುತ್ತ ಓಡಿದನು. ಕುರಿಕಾಯುವವನು ಏಳುತ್ತಲೇ ಆತ ಕುಳಿತ ಬಂಡೆ ಸರ್ರನೆ **ಧಡ್**ಽಽ... **ಧಡ್**ಽಽ... ಎಂದು ಕಣಿವೆಗೆ ಉರುಳಿತು. ಇದನ್ನು ನೋಡಿದ ಕುರಿಕಾಯುವವನ ಎದೆ ಢವ ಢವ ಎಂದಿತು.

ಆಗ ಹದ್ದು ಕುರಿಕಾಯುವವನ ಹತ್ತಿರ ಬಂದಿತು. ಮುಂಡಾಸನ್ನು ಆತನ ತಲೆಯ ಮೇಲೆ ಪಟಕ್ಕನೆ ಇಟ್ಟು **ರೊಂಯ್ಯನೆ** ಹಾರಿತು. ಕುರಿಕಾಯುವವನಿಗೆ ತಾನು ಜೀವ ಉಳಿಸಿದ ಹದ್ದೇ ತನ್ನ ಜೀವ ಉಳಿಸಿತು ಎಂಬುದು ತಿಳಿಯಿತು ಅವನು ಖುಷಿಪಟ್ಟನು. ಹದ್ದಿಗೆ ಧನ್ಯವಾದಗಳನ್ನು ಹೇಳಿದನು.



## ಮಾತನಾಡೋಣ ಬನ್ನಿ....

1. ಕುರಿ ಮೇಯಿಸುವವನಿಗೆ ಕುರಿಗಾಹಿಯನ್ನುತ್ತಾರೆ, ದನ ಮೇಯಿಸುವವನಿಗೆ ಏನೆಂದು ಕರೆಯುತ್ತಾರೆ?
2. ಬಂಡೆ ಕಣಿವೆಗೆ ವಾಲಿರುವದನ್ನು ಕುರಿಗಾಹಿ ಮೊದಲೇ ನೋಡಿದ್ದರೆ ಏನಾಗುತ್ತಿತ್ತು?
3. ಕುರಿಗಾಹಿಯ ಜೀವ ಉಳಿಯಲು ಏನು ಕಾರಣ?

**1. ಕಥೆಯನ್ನು ಕ್ರಮವಾಗಿ ಜೋಡಿಸು. ನಂತರ ಅದನ್ನು ಓದಿ ಹೇಳು.**

( ) ಬಂಡೆಯ ಮೇಲೆ ಕುಳಿತು ನಿದ್ರಿಸತೊಡಗಿದ.

( ) ಅದನ್ನು ಕಂಡ ಕುರಿಗಾಹಿಗೆ ಕರುಣೆ ಬಂತು.

( ) ಬಂಡೆ ಸರ್ರನೆ ಕಣಿವೆಗೆ ಉರುಳಿತು.

( ) ಕುರಿಗಾಹಿಯೊಬ್ಬ ಬೆಟ್ಟದ ಮೇಲೆ ಕುರಿಗಳನ್ನು ಮೇಯಿಸುತ್ತಿದ್ದ.

( ) ಹದ್ದಿಗೆ ಧನ್ಯವಾದಗಳನ್ನು ಹೇಳಿದ.

( ) ಬಂಡೆ ಬೆಟ್ಟದ ಕಣಿವೆಗೆ ವಾಲಿರುವದು ನೋಡಿರಲಿಲ್ಲ.

( ) ಹದ್ದು ಬಲೆಯಲ್ಲಿ ಸಿಲುಕಿರುವುದನ್ನು ನೋಡಿದ.



## ಪ್ರಶ್ನೆಗಳಿಗೆ ಉತ್ತರ ಬರೆ.

ಅ) ಕುರಿಗಳನ್ನು ಮೇಯಿಸಲು ಕುರಿಕಾಯುವವ ಎಲ್ಲಿಗೆ ಹೋಗುತ್ತಿದ್ದನು?

---------------------------------------------

ಬ) ಹದ್ದು ಹೇಗೆ ಹಾರಿ ಹೋಯಿತು? ಈ ಪ್ರಶ್ನೆಗೆ ಸರಿಯಾದ ಉತ್ತರವನ್ನು ಆಯ್ಕೆ ಮಾಡು -

i) ಕೋಪದಿಂದ ii) ಗಾಬರಿಯಿಂದ iii) ಸಂತೋಷದಿಂದ iv) ಅಳುತ್ತ

---------------------------------------------



## ಕೆಳಗಿನ ಪ್ರಾಣಿ / ಪಕ್ಷಿಗಳ ಧ್ವನಿಗಳನ್ನು ಶಬ್ದಗಳಲ್ಲಿ ಬರೆಯಿರಿ.

1)  ________________

2)  ________________

3)  ________________

4)  ________________

5)  ________________

6)  ________________

## ಓದು ಬರೆ



### ಕೆಳಗಿನ ಪದಗಳನ್ನು ಗಟ್ಟಿಯಾಗಿ ಓದು ಮತ್ತು ಬರೆ

| | | | |
|---|---|---|---|
| ರೊಕ್ಕ – ಗಿಕ್ಕ | ಬಿಚ್ಚು – ಕಿಚ್ಚು | ಮಗ್ಗಿ – ಸುಗ್ಗಿ | ಗೆಜ್ಜೆ – ಹೆಜ್ಜೆ |
| ಧರ್ಮ – ಕರ್ಮ | ಅರ್ಪಣ – ದರ್ಪಣ | ಅಣ್ಣ – ಬಣ್ಣ | ರೊಟ್ಟಿ – ಗಿಟ್ಟಿ |
| ಅಮ್ಮ – ತಮ್ಮ | ಹತ್ತಿ – ಗಿತ್ತಿ | ಪೆದ್ದ – ಗೆದ್ದ | ಅನ್ನ – ರನ್ನ |
| ಗುಬ್ಬಿ – ಸುಬ್ಬಿ | ಕನಿಷ್ಠ – ಗರಿಷ್ಠ | ಶೃಂಗ – ಭೃಂಗ | ಕಪ್ಪೆ – ರೆಪ್ಪೆ |
| ಚಿತ್ರ – ಮಿತ್ರ | ಶರಣ್ಯ – ಅರಣ್ಯ | ಸತ್ವ – ತತ್ವ | ಮೇಲ್ಭಾಗ – ಇಬ್ಭಾಗ |
| ತಜ್ಞ – ಸೂಜ್ಞ | ತೇಜಸ್ಸು – ಓಜಸ್ಸು | ಅಕ್ಕರೆ – ಸಕ್ಕರೆ | ಕಣ್ಣು – ಹಣ್ಣು |

| | | | |
|---|---|---|---|
| - - - - - - - - - - | - - - - - - - - - - | - - - - - - - - - - | - - - - - - - - - - |
| - - - - - - - - - - | - - - - - - - - - - | - - - - - - - - - - | - - - - - - - - - - |
| - - - - - - - - - - | - - - - - - - - - - | - - - - - - - - - - | - - - - - - - - - - |
| - - - - - - - - - - | - - - - - - - - - - | - - - - - - - - - - | - - - - - - - - - - |
| - - - - - - - - - - | - - - - - - - - - - | - - - - - - - - - - | - - - - - - - - - - |
| - - - - - - - - - - | - - - - - - - - - - | - - - - - - - - - - | - - - - - - - - - - |

**ಸೂಚನೆ :** ಮೇಲಿನ ಕಥೆಯಲ್ಲಿಯ ವಾಕ್ಯಗಳನ್ನು ವಿರಾಮ ಚಿಹ್ನೆ, ಯೋಗ್ಯ ಉಚ್ಚಾರಣೆ ಹಾಗೂ ಧ್ವನಿಯ ಏರಿಳಿತದೊಂದಿಗೆ ಸರಿಯಾಗಿ ಸಹಭಾಗಿವಾಚನ ಮಾಡಿಸಿಕೊಳ್ಳಿರಿ. ಗ್ರಂಥಾಲಯದಲ್ಲಿನ ಒಗಟಿನ ಪುಸ್ತಕಗಳಿಂದ ಒಗಟುಗಳನ್ನು ಹೇಳಿಸಿ ಕೊಳ್ಳಿರಿ.

**ಉಪಕಾರಕ್ಕೆ ಪ್ರತಿ ಉಪಕಾರ ಮಾಡು.**

# 10. ಅಜ್ಜಿಯ ಟ್ರಂಕು



ಅಟ್ಟದ ಮೇಲಿನ ಹಳೆಯ ಟ್ರಂಕು
ಬಾಲ್ಯದ ನೆನಪಿಗೆ ಚೆಲ್ಲಿತು ಬೆಳಕು

ಅಜ್ಜಿಯ ಕಾಡಿಸಿ ಇಳಿಸಿದೆವು ಕೆಳಗೆ
ಧೂಳನು ಜಾಡಿಸಿ ತೆರೆದೆವು ಒಳಗೆ

ಕಪ್ಪು ಬಿಳುಪಿನ ಹಲವು ಚಿತ್ರಗಳು
ಹರಿದು ಹೋಗದ ಹಳೆಯ ದಾಖಲೆಗಳು

ಅಪ್ಪನ ಬಾಲ್ಯದ ಚಿತ್ರವ ನೋಡಿ
ಪುಟ್ಟನು ನಕ್ಕನು ಅಕ್ಕನಿಗೆ ಹೇಳಿ

ಆಗಿನ ಕಾಲದ ಬದುಕಿನ ಮೆಲುಕು
ಅಜ್ಜಿಗೆ ನೆನಪಿಸಿ ಹೇಳಿಸಿತು ಟ್ರಂಕು

– ನರಸಿಂಹರೆಡ್ಡಿ ಯಂಕಾಮೊಳ



**ಮಾತನಾಡೋಣ ಬನ್ನಿ....**

1. ನಿಮ್ಮ ಮನೆಯಲ್ಲಿಯ ಹಳೆಯ ವಸ್ತುಗಳ ಹೆಸರು ಹೇಳು.
2. ನಿನಗೆ ಇಷ್ಟವಾದ ಹಳೆಯ ವಸ್ತುಗಳು ಯಾವುವು?

## ಶಬ್ದಕೋಶದ ಸಹಾಯದಿಂದ ಶಬ್ದದ ಅರ್ಥ ಹುಡುಕು.

1) ಮೆಲುಕು –    2) ದಾಖಲೆ –

## ❖ ಹೊಂದಿಸು

| | | |
|---|---|---|
| 1. ಅಜ್ಜಿಯ ಟ್ರಂಕು. | (ಅ) |  |
| 2. ಹಳೆಯ ದಾಖಲೆ. | (ಆ) |  |
| 3. ಅಪ್ಪನ ಫೋಟೋ. | (ಇ) |  |
| 4. ಅಜ್ಜಿ | (ಈ) |  |

## ನಿಮ್ಮ ಮನೆಯ ಹಳೆಯ ಟ್ರಂಕಿನಲ್ಲಿ ಏನಿರಬಹುದು ಊಹಿಸಿ ಬರೆ.



--------------------
--------------------
--------------------
--------------------

## ಪ್ರಾಸಯುಕ್ತ ಪದಗಳನ್ನು ಓದು ಬರೆ.

1. ಕಾಡಿಸಿ–ಜಾಡಿಸಿ ----------------------
2. ಕೆಳಗೆ–ಒಳಗೆ ----------------------
3. ಚಿತ್ರಗಳು–ದಾಖಲೆಗಳು ----------------------

**ಉದಾಹರಣೆಯಂತೆ ತೋರಿಸಿದಂತೆ ಸ್ವರ ಮತ್ತು ವ್ಯಂಜನಗಳು ಕೂಡಿಸಿ ಶಬ್ದ ತಯಾರಿಸಿ.**

ಕ್+ಆ+ಡ್+ಇ+ಸ್+ಇ = ಕಾಡಿಸಿ

ಒ+ಳ್+ಅ+ಗ್+ಎ = ________

ಹ್+ಓ+ಗ್+ಅ+ದ್+ಅ = ________

ಟ್+ರ್+ಅಂ+ಕ್+ಉ = ________

## ಏನು ಮಾಡುವೆ.....?

1. ಹಳೆಯ ವಸ್ತುಗಳ ಮೇಲಿನ ಧೂಳು..........
2. ಹಳೆಯ ದಾಖಲೆಗಳನ್ನು....................
3. ದಿನಾಲು ಸ್ನಾನ............................
4. ಶಾಲೆಯ ಸಮವಸ್ತ್ರ..........................
5. ಉಗುರುಗಳನ್ನು ನಿಯಮಿತವಾಗಿ............

## ❖ ಅಜ್ಜಿಯ ಊರಿಗೆ ಹೋದ ಅನುಭವವನ್ನು ಬರೆ.

**ಸೂಚನೆ :** ಪ್ರಸ್ತುತ ಕವಿತೆಯನ್ನು ಹಾವಭಾವದಿಂದ ರಾಗಬದ್ಧವಾಗಿ ಹಾಡಲು ಪ್ರೇರೇಪಿಸಿರಿ. ನಂತರ ಮಕ್ಕಳಿಗೆ ತಮ್ಮ ತಮ್ಮ ಮನೆಯಲ್ಲಿಯ ಅಪರೂಪದ ಹಳೆಯ ವಸ್ತುಗಳ ಹೆಸರುಗಳನ್ನು ಹೇಳಲು ಪ್ರೇರಿಸಿರಿ.

# 11. ಸಂವಾದ - ಹೇಳು ನಾನಾರು?

ಮಗು :- ಹುಳಿ ಹುಳಿ ಹಣ್ಣೆ ನೀನಾರು ?
ಹಣ್ಣು :- ಹೇಳು ನೋಡೋಣ ನಾನಾರು ?
ಮಗು :- ಬಾಯಲಿ ನೀರು ಬರುತ್ತಿದೆಯಲ್ಲ
ನಿನ್ನನ್ನು ನೋಡಲು......
ಹುಣಸೆ ಹಣ್ಣು ನೀನಲ್ಲವೇ?
ಹಣ್ಣು :- ಭೇಷ್ ಭೇಷ್ !





ಮಗು :- ಹುಳಿಹುಳಿ ಹಣ್ಣೆ ನೀನಾರು?
ಹಣ್ಣು :- ಹೇಳು ನೋಡೋಣ ನಾನಾರು?
ಮಗು :- ರಸ ರಸ ನೀನು ಹೀರುವೆ ನಾನು..
ಲಿಂಬೆ ಹಣ್ಣು ನೀನಲ್ಲವೇ?
ಹಣ್ಣು :- ಅಬ್ಬ ಬ್ಬಾ ! ಎಷ್ಟೊಂದು ಜಾಣ.

ಮಗು :- ಸಿಹಿ ಸಿಹಿ ಹಣ್ಣೆ ನೀನಾರು?
ಹಣ್ಣು :- ಹೇಳು ನೋಡೋಣ ನಾನಾರು?
ಮಗು :- ಬಣ್ಣವು ಹಸಿರು ಗಾತ್ರವು ದೊಡ್ಡದು
ಹಲಸಿನ ಹಣ್ಣು ನೀನಲ್ಲವೇ?
ಹಣ್ಣು :- ಅಲ್ಲವೇ ಅಲ್ಲ ಮುದ್ದಿನ ಕಂದ ಕಲ್ಲಂಗಡಿ
ಹಣ್ಣು ನಾನು.





ಮಗು :- ಸಿಹಿ ಸಿಹಿ ಹಣ್ಣೆ ನೀನಾರು?
ಹಣ್ಣು :- ಹೇಳು ನೋಡೋಣ ನಾನಾರು?
ಮಗು :- ಹಳದಿ ಬಣ್ಣದ ಸಿಪ್ಪೆಯ ತೆಗೆದು
ಬಾಯಿಗೆ ಇಳಿಸುವೆನು
ನೀನೆಂದರೆ ನನಗೆ ಬಲು ಇಷ್ಟ
ಬಾಳೆ ಹಣ್ಣು ನೀನಲ್ಲವೇ?
ಹಣ್ಣು :- ಜಾಣ......... ಜಾಣಮರಿ ನೀನು.



**ಮಾತನಾಡೋಣ ಬನ್ನಿ:-**

1) ಹಣ್ಣುಗಳನ್ನು ಏಕೆ ತಿನ್ನಬೇಕು?

2) ನಿಮ್ಮ ಪರಿಸರದಲ್ಲಿ ಇರುವ ಹಣ್ಣಿನ ಮರಗಳು ಯಾವುವು?



**ಉದಾಹರಣೆಯಲ್ಲಿ ತೋರಿಸಿದಂತೆ ಶಬ್ದಗಳನ್ನು ಬರೆ.**




❖ **ಉದಾ :-ಸಿಹಿ - ಸಿಹಿ**

1) ______________________

2) ______________________

3) ______________________

4) ______________________

5) ______________________

6) ______________________

❖ **ಉತ್ತರಿಸು.**

1) ಬಾಯಲ್ಲಿ ಯಾರಿಗೆ ನೀರು ಬರುತ್ತಿತ್ತು?

-------------------------------------------

2) ಗೊಂಚಲು ಹೊಂದಿರುವ ಹಣ್ಣು ಯಾವುದು?

-------------------------------------------

3) ಒಳಗೆ ಕೆಂಪು ಬಣ್ಣವಿರುವ ಹಣ್ಣು ಯಾವುದು?

-------------------------------------------

4) ಸಿಪ್ಪೆಯನ್ನು ತೆಗೆದು ತಿನ್ನುವ ಹಣ್ಣುಗಳ ಹೆಸರನ್ನು ಬರೆ.

-------------------------------------------

❖ **ನನ್ನ ಕೆಲಸ.**

1)  --------------------

3)  --------------------

2)  --------------------

4)  --------------------

❖ **ನೀನು ಇಷ್ಟಪಡುವ ಹಣ್ಣುಗಳ ಪಟ್ಟಿಯನ್ನು ತಯಾರಿಸು.**

..................................................................................

..................................................................................

❖ **ಹಣ್ಣುಗಳಿಂದ ಯಾವ ಯಾವ ಪದಾರ್ಥಗಳನ್ನು ತಯಾರಿಸುತ್ತಾರೆ ಎನ್ನುವುದನ್ನು ನಿನ್ನ ಶಿಕ್ಷಕರು, ಅಪ್ಪ, ಅಮ್ಮ, ಅಣ್ಣ, ಅಕ್ಕ, ಗೆಳೆಯರಿಂದ ಕೇಳಿ ತಿಳಿದುಕೊಂಡು ಬಂದು ವರ್ಗದಲ್ಲಿ ಹೇಳು.**

**ಉದಾ:**

ಜ್ಯೂಸ್ —



— ಸಲಾಡ

ಬರ್ಫಿ







❖ **ಬಾಳೆಹಣ್ಣಿನ ಸೀಕರಣೆಯನ್ನು ಹೇಗೆ ತಯಾರಿಸುವೆ ಎಂಬುದನ್ನು ಬರೆ.**





**ಬಾಳೆಹಣ್ಣಿನ ಸೀಕರಣೆ**

..................................................

..................................................

..................................................

..................................................

..................................................

..................................................

..................................................

..................................................

..................................................

..................................................





**ಸೂಚನೆ :** ಕವಿತೆಯನ್ನು ಸಂಭಾಷಣೆಯ ರೂಪದಲ್ಲಿ ರಾಗಬದ್ಧವಾಗಿ ಹಾಡಿರಿ. ಮಕ್ಕಳಿಂದ ಹಾವ-ಭಾವದೊಂದಿಗೆ ಹೇಳಿಸಿಕೊಳ್ಳಿರಿ.

 




**ಸೂಚನೆ :** ಮೇಲಿನ ಚಿತ್ರದ ಸಹಾಯದಿಂದ ಅಂಗಡಿಕಾರ ಮತ್ತು ಮಗುವಿನ ನಡುವೆ ನಡೆದ ಸಂವಾದವನ್ನು ಬರೆಯಿರಿ.

ಅಂಗಡಿಕಾರ : ....................................................................

ಮಗು : ....................................................................

ಅಂಗಡಿಕಾರ : ....................................................................

ಮಗು : ....................................................................

ಅಂಗಡಿಕಾರ : ....................................................................

ಮಗು : ....................................................................

ಅಂಗಡಿಕಾರ : ....................................................................

**ಸೂಚನೆ :** ಮಕ್ಕಳಲ್ಲಿ ಲೇಖನ ಕೌಶಲ್ಯ ವಿಕಾಸಕ್ಕಾಗಿ ಅಂಗಡಿಕಾರ, ಕಾಯಿಪಲ್ಯ ಮಾರಾಟಗಾರ, ಗೌಳಿಗ ಹೀಗೆ ಬೇರೆ ಬೇರೆ ಉದ್ಯೋಗದ ಜನರೊಂದಿಗೆ ಸಂಭಾಷಣೆ ಮಾಡಲು ಪ್ರಶ್ನೆಗಳನ್ನು ತಯಾರಿಸಲು ಪ್ರೋತ್ಸಾಹಿಸಿರಿ?

**ಉದಾ:-** 1) ನಿಮ್ಮ ಅಂಗಡಿಯಲ್ಲಿ ಯಾವ ಯಾವ ವಸ್ತುಗಳು ಇವೆ?
2) ಈ ವಸ್ತುಗಳನ್ನು ಎಲ್ಲಿಂದ ತರುತ್ತೀರಿ?
3) ಒಂದು ಕಂಪಾಸಿನ ಬೆಲೆ ಎಷ್ಟು?
4) ಇಂತಹ ಪ್ರಶ್ನೆಗಳನ್ನು ತಯಾರಿಸಲು ಪ್ರೋತ್ಸಾಹಿಸಿರಿ?

**ಬುದ್ಧಿಗೆ ಪಾಠ ಆರೋಗ್ಯಕ್ಕೆ ಆಟ**

# ಚಿತ್ರ ಹರಟೆ - ಸಾರಿಗೆ





**ಸೂಚನೆ :** ಚಿತ್ರವನ್ನು ಸರಿಯಾಗಿ ನಿರೀಕ್ಷಣೆ ಮಾಡಿರಿ. ನಿರೀಕ್ಷಣೆ ಮಾಡಿದ ಚಿತ್ರದ ಬಗ್ಗೆ ಗೆಳೆಯರ ಜೊತೆಗೆ ಚರ್ಚಿಸಿರಿ. ಇಲ್ಲಿ ಕಂಡು ಬರುವ ವಾಹನಗಳು ಯಾವವು? ನೀರಿನಲ್ಲಿ ಚಲಿಸುವ ವಾಹನಗಳು ಯಾವವು? ನಿನಗೆ ಯಾವ ವಾಹನದಲ್ಲಿ ಓಡಾಡಲು ಇಷ್ಟ? ನಿಮ್ಮ ಮನೆಯಲ್ಲಿ ಯಾವ ವಾಹನಗಳು ಇವೆ. ಶಿಕ್ಷಕರು ಮಕ್ಕಳಿಗೆ ಈ ರೀತಿಯ ಪ್ರಶ್ನೆಗಳನ್ನು ಕೇಳಿ ಅವರ ಚರ್ಚೆಯಲ್ಲಿ ಭಾಗವಹಿಸಿರಿ. ಮಕ್ಕಳಿಗೆ ತಮ್ಮದೇ ಆದ ಭಾಷೆಯಲ್ಲಿ ಮಾತನಾಡಲು ಅವಕಾಶ ನೀಡಿರಿ.

# 12. ಬೆಂಡೆಕಾಯಿ ತೊಂಡೆಕಾಯಿ

ಬೆಂಡೆಕಾಯಿ ತೊಂಡೆಕಾಯಿ ತೋಟದಲ್ಲಿದೆ
ಉಂಡೆ ಉಂಡೆ ಬೆಲ್ಲ ಬೆಲ್ಲ ಡಬ್ಬದಲ್ಲಿದೆ ॥ ಪ ॥

ಕುಂಯ್ ಕುಂಯ್ ನಾಯಿಮರಿ ಎಲ್ಲಿದೆ?
ಜಗಲಿಯಲ್ಲಿ ಮೂಲೆಯಲ್ಲಿ ಮಲಗಿದೆ
ಅಡುಗೆ ಕೋಣೆಯಲ್ಲಿ ಪಾತ್ರೆ ಉರುಳಿದೆ.
ಮರಿಬೆಕ್ಕು ಹಾಲು ಕುಡಿದು ಓಡಿದೆ ॥ 1 ॥

ಗಗನದಲ್ಲಿ ಮುಗಿಲ ಮೇಲೆ ಏನಿದೆ?
ಬೆಳ್ಳಿ ಬಟ್ಟಲೊಂದು ಅಲ್ಲಿ ತೇಲಿದೆ
ಹಾರಿ ಬರುವ ಹಕ್ಕಿ ಈಗ ಎಲ್ಲಿದೆ ?
ಹಾರಿ ಹೋಗಿ ಮರದ ಮೇಲೆ ಕುಳಿತಿದೆ ॥ 2 ॥

ಅಟ್ಟದಲ್ಲಿ ಏನೋ ಶಬ್ದ ಆಗಿದೆ
ಹೆಗ್ಗಣವು ಆಚೆ ಈಚೆ ಓಡಿದೆ
ಹಟ್ಟಿಯಲ್ಲಿ ದನವು ಏಕೋ ಕೂಗಿದೆ
ಹಗ್ಗ ಬಿಚ್ಚಿ ಕರವು ಎಲ್ಲೋ ಓಡಿದೆ ॥ 3 ॥

ನನಗೆ ಏಕೋ ನಿದ್ರೆ ಈಗ ಬರುತಿದೆ
ಹೌದು ಈಗ ತುಂಬಾ ರಾತ್ರಿಯಾಗಿದೆ
ಸುತ್ತಲೆಲ್ಲ ಕತ್ತಲೆಯು ತುಂಬಿದೆ
ಲೋಕವೆಲ್ಲ ನಿದ್ರೆಯಲ್ಲಿ ಮುಳುಗಿದೆ ॥ 4 ॥

– ಆರ್. ರಾಧಾಕೃಷ್ಣ





## ಮಾತನಾಡೋಣ ಬನ್ನಿ.

1) ನಿಮಗೆ ಗುರುತಿರುವ ತರಕಾರಿಗಳು ಯಾವವು ?

2) ಸಾಕುಪ್ರಾಣಿಗಳ ಹೆಸರು ಹೇಳಿರಿ?

3) ರಾತ್ರಿ ಆಕಾಶದಲ್ಲಿ ಏನೇನು ಕಾಣಿಸುತ್ತವೆ?

4) ನಾಯಿಮರಿ ಹೇಗೆ ಶಬ್ದ ಮಾಡುತ್ತದೆ?

## ಹೊಂದಿಸು.

| | |
|---|---|
| 1) ತೋಟದಲ್ಲಿ ಇರೋದು | ಅ) ಹೆಗ್ಗಣ |
| 2) ಜಗಲಿಯ ಮೂಲೆಯಲ್ಲಿ ಮಲಗಿರುವುದು | ಆ) ಹಕ್ಕಿ |
| 3) ಹಾಲು ಕುಡಿದು ಓಡಿದೆ | ಇ) ಬೆಂಡೆಕಾಯಿ ತೊಂಡೆಕಾಯಿ |
| 4) ಮರದ ಮೇಲೆ ಕುಳಿತಿದೆ | ಈ) ನಾಯಿಮರಿ |
| 5) ಆಚೆ ಈಚೆ ಓಡಿದೆ | ಉ) ಮರಿ ಬೆಕ್ಕು |

## ಬಿಟ್ಟಸ್ಥಳ ತುಂಬು.

1) .................... ನಾಯಿ ಮರಿ ಎಲ್ಲಿದೆ ?

2) ನನಗೆ ಏಕೋ .................... ಈಗ ಬರುತ್ತಿದೆ.

3) .................... ಮುಗಿಲ ಮೇಲೆ ಏನಿದೆ?

4) ಲೋಕವೆಲ್ಲ ನಿದ್ರೆಯಲ್ಲಿ ....................

❖ **ಕೇಳಿದ/ಓದಿದ ಹನಿಗವನಗಳನ್ನು ವರ್ಗದಲ್ಲಿ ಹಾಡಿಸಿಕೊಳ್ಳಿರಿ.**

## ಪದ್ಯದಲ್ಲಿ ಬಂದ ಪ್ರಾಸ ಪದಗಳನ್ನು ಬರೆ.

ಉದಾ. ಮಲಗಿದೆ – ಉರುಳಿದೆ

........................................................................................

........................................................................................

**ಸೂಚನೆ :** ಯೋಗ್ಯವಾದ ಹಾವಭಾವದೊಂದಿಗೆ/ ಅಭಿನಯದೊಂದಿಗೆ ಈ ಕವಿತೆಯನ್ನು ಲಯಬದ್ಧವಾಗಿ ಸಾಮೂಹಿಕವಾಗಿ ಹಾಡಿರಿ ಮತ್ತು ಹಾಡಿಸಿರಿ.

## ಅಕ್ಷರ ಜೋಡಿಸಿ ವಾಕ್ಯ ತಯಾರಿಸು.

| | | | | | |
|---|---|---|---|---|---|
| ಮ | ಬೆ | ಹಾ | ಕು | ದು | ಡಿ |
| ರಿ | ಕ್ಕು | ಲು | ಡಿ | ಓ | ದೆ |

..........................................................................

## ಚೌಕಟ್ಟಿನಲ್ಲಿಯ ಹಣ್ಣು / ತರಕಾರಿ ಹುಡುಕಿ ಬರೆಯಿರಿ.

| | | | | |
|---|---|---|---|---|
| ತೊಂ | ಡೆ | ಕಾ | ಯಿ | ಕ |
| ಮಾ | ಬೆಂ | ಪೇ | ರ | ಲ |
| ವು | ಡೆ | ಕಿ | ತ್ತ | ಳೆ |
| ಸೇ | ಕಾ | ದಾ | ಳಿಂ | ಬೆ |
| ಬು | ಯಿ | ನೇ | ರ | ಳೆ |

ಉದಾ: ಪೇರಲ

______

______

______

______

______

## ತರಕಾರಿ ಮಾರಾಟಗಾರ ಮತ್ತು ಗ್ರಾಹಕರ ನಡುವೆ ನಡೆದ ಸಂವಾದವನ್ನು ಬರೆ.



______

______

______

______

______

### ನಾಲಿಗೆ ನುಲಿ

1. ಕಾಗೆ ಪುಕ್ಕ ಗುಬ್ಬಿ ಪುಕ್ಕ
2. ಕಪ್ಪು ಕುಂಕುಮ ಕೆಂಪು ಕುಂಕುಮ
3. ರೈಲು ಲಾರಿ ರೈಲು ಲಾರಿ
4. ತರೀಕೆರೆ ಏರಿ ಮೇಲೆ ಮೂರು ಕರಿ ಕುರಿಮರಿ ಮೇಯಿತು



**ಸೂಚನೆ :** ಮಕ್ಕಳಿಂದ ಮೇಲಿನ ವಾಕ್ಯಗಳನ್ನು ಗಟ್ಟಿಯಾಗಿ ಹೇಳಿಸಿಕೊಳ್ಳಿರಿ. ಮೊದಲು ನಿಧಾನವಾಗಿ ಸ್ಪಷ್ಟವಾಗಿ ಹೇಳಿಸಿಕೊಳ್ಳಿರಿ, ಹಂತ ಹಂತವಾಗಿ ವೇಗವಾಗಿ ವಾಕ್ಯಗಳನ್ನು ಹೇಳಲು ಪ್ರೋತ್ಸಾಹಿಸಿರಿ. ಇಂತಹ ಇನ್ನೂ ಕೆಲವು ಉದಾಹರಣೆ ಕೊಟ್ಟು ಉಚ್ಚಾರಣಾ ಕೌಶಲ್ಯವನ್ನು ಬೆಳೆಸಿರಿ.

**ಹಸಿರು ತರಕಾರಿ ಆರೋಗ್ಯಕ್ಕೆ ಹಿತಕಾರಿ**

# 13.  ಸಂತೋಷಪುರದ ಕೆರೆ 



ನಮ್ಮ ಊರು ಸಂತೋಷಪುರ. ಊರಿನ ಹೊರಭಾಗದಲ್ಲಿ ಸುಂದರವಾದ ಕೆರೆಯಿದೆ. ಬಹುಕಾಲದಿಂದಲೂ ಊರಿನ ಜನರ, ಪಶು-ಪಕ್ಷಿಗಳ ನೀರಿನ ದಾಹ ತಣಿಸುತ್ತಿದೆ. ಈ ಕೆರೆಯು ಮಳೆಗಾಲದಲ್ಲಿ ನೀರಿನಿಂದ ತುಂಬಿ ತುಳುಕುತ್ತದೆ. ಕೆರೆಯ ಸುತ್ತಲೂ ಇರುವ ಹಚ್ಚ ಹಸಿರಾದ ಹುಲ್ಲಿನ ಹೊದಿಕೆ ಜನರ ಮನ ತಣಿಸುತ್ತದೆ.

ಪರಿಸರದಲ್ಲಿರುವ ತರತರದ ಗುಲಾಬಿ ಹೂವಿನ ಗಿಡಗಳು ಕಣ್ಣು ಸೆಳೆಯುತ್ತವೆ. ಬಣ್ಣ ಬಣ್ಣದ ಮಲ್ಲಿಗೆ, ಸಂಪಿಗೆಗಳು ಸುವಾಸನೆ ಬೀರುತ್ತವೆ. ಜನರನ್ನು ಆಕರ್ಷಿಸುತ್ತವೆ. ವಾರಾಂತ್ಯದ ವಿಶ್ರಾಂತಿಗೆ ಜನರು ಪರಿವಾರದೊಂದಿಗೆ ಕೆರೆಯ ವೀಕ್ಷಣೆಗೆ ಬರುತ್ತಾರೆ. ಮಕ್ಕಳು ದೋಣಿಯಲ್ಲಿ ಕುಳಿತು ಆನಂದ ಪಡುತ್ತಾರೆ.

ಚಿಣ್ಣರು ಈಜುವ ಬಾತುಕೋಳಿಯನ್ನು ನೋಡಿ ಕೇಕೆ ಹಾಕಿ ನಗುತ್ತಾರೆ. ಮೀನುಗಳಿಗೆ ತಿಂಡಿ ಎಸೆಯುತ್ತಾರೆ. ಅವು ಜಿಗಿಯುತ್ತ ಈಜುವುದನ್ನು ಕಂಡು ಬೆರಗಾಗುತ್ತಾರೆ. ನೀರಿನಲ್ಲಿ ಆಮೆ, ಕಪ್ಪೆ, ಮೀನುಗಳು ವಾಸವಾಗಿವೆ. ಕಾಗೆ, ಗುಬ್ಬಿ, ಗರುಡ, ನೀರುಕೋಳಿಗಳಂತಹ ಪಕ್ಷಿಗಳು ಹಾರುತ್ತ ಬರುತ್ತವೆ. ಮರದಿಂದ ಮರಕ್ಕೆ ಮಂಗಗಳ ಜಿಗಿತ ಕಂಡು ಮಕ್ಕಳು ಆನಂದಿಸುತ್ತಾರೆ. ಗಿಳಿ ಕೋಗಿಲೆಗಳ ಗಾನ ಕಿವಿಗೆ ಇಂಪನ್ನು ಕೊಡುತ್ತದೆ. ಹೂದೋಟವು ಮನಕೆ ಸಂತಸ ನೀಡುತ್ತದೆ.

ಬಿಸಿಲಿನಿಂದ ತಣ್ಣಗಾಗಲು ಚಿಣ್ಣರು ಕೆರೆಯಲ್ಲಿ ಈಜುತ್ತಾರೆ. ಕೆರೆಯ ಶುಚಿಯನ್ನು ಕಾಪಾಡಲು ಅಲ್ಲಲ್ಲಿ ಕಸದ ತೊಟ್ಟಿಗಳನ್ನು ಇಡಲಾಗಿದೆ. ನಮ್ಮೂರ ಕೆರೆಯ ಪರಿಸರ ನಮಗೆ ಬಲು ಇಷ್ಟ.



**ಮಾತನಾಡೋಣ ಬನ್ನಿ:-**

1) ಕೆರೆಯಲ್ಲಿ ನೀರು ಎಲ್ಲಿಂದ ಬರುತ್ತದೆ?

2) ಕೆರೆಯ ಪರಿಸರವನ್ನು ಶುಚಿಯಾಗಿ ಇಡಲು ಏನು ಮಾಡುವಿರಿ?

3) ಕೆರೆಯ ಉಪಯೋಗ ಹೇಳಿರಿ.

❖ **ಕೆಳಗಿನ ಚಿತ್ರದಲ್ಲಿಯ ತಪ್ಪು ಕೃತಿಯನ್ನು ಗುರುತಿಸಿರಿ ಮತ್ತು ಯೋಗ್ಯ ಕೃತಿಯನ್ನು ಚಿತ್ರದ ಕೆಳಗೆ ಬರೆಯಿರಿ.**







| | | |
|---|---|---|
| ಹೂಗಳನ್ನು ಕೀಳ ಬಾರದು. | | |



**ವಾಕ್ಯ ಸರಿಪಡಿಸಿ ಯೋಗ್ಯ ಸ್ಥಳದಲ್ಲಿ ಪೂರ್ಣವಿರಾಮ ಚಿಹ್ನೆ ಬಳಸು.**

**ಉದಾ:** ತಿಂದನು ಸುರೇಶ ಹಣ್ಣನ್ನು – ಸುರೇಶ ಹಣ್ಣನ್ನು ತಿಂದನು.

ಕಥೆಯನ್ನು ಹೇಳಿದಳು ಅಜ್ಜಿಯು –

ಕುಡಿಯಿತು ಗುಬ್ಬಿಯು ನೀರು –

ಗಿಡದಿಂದ ಜಿಗಿಯಿತು ಮಂಗವು –

**ಸೂಚನೆ :** ಚಿತ್ರವನ್ನು ನೋಡಿ ಗೆಳೆಯರ ಜೊತೆಗೆ ಚರ್ಚಿಸಿರಿ. ನಿಮ್ಮ ಊರಿನ ಕೆರೆಯ ಸುತ್ತಮುತ್ತ ಯಾವ ಪ್ರಾಣಿ/ಪಕ್ಷಿಗಳು ಕಂಡು ಬರುತ್ತವೆ ಎಂಬುದರ ಬಗ್ಗೆ ಶಿಕ್ಷಕರ ಜೊತೆಗೆ ಚರ್ಚಿಸಿರಿ. ಮಕ್ಕಳಿಗೆ ಕೆರೆಯ ಮಹತ್ವದ ಬಗ್ಗೆ ಹೇಳಿರಿ.

**ನಿಸರ್ಗದ ಚೆಲುವು ನಮ್ಮೆಲ್ಲರ ನಲಿವು**

## 14. ರೈತ

ರೈತ ದೇಶದ ಬೆನ್ನೆಲುಬು. ಸೂರ್ಯ ಉದಯಿಸುವ ಮುನ್ನವೇ ಆತ ಏಳುವನು. ಹಕ್ಕಿಗಳು ಚಿಲಿಪಿಲಿಗುಟ್ಟುವ ಮೊದಲೇ ಏಳುವನು. ಹೀಗೆ ರೈತ ನಸುಕಿನಲ್ಲಿಯೇ ಕಾಯಕಕ್ಕಾಗಿ ಎದ್ದೇಳುವನು.

ರೈತ ಎತ್ತುಗಳಿಗೆ ಮೇವು ಹಾಕುವನು. ಅವುಗಳ ಜೊತೆಗೆ ತಾನೂ ನ್ಯಾರಿ ಮಾಡುವನು. ಆಮೇಲೆ ಎತ್ತುಗಳನ್ನು ಹೊಲಕ್ಕೆ ತೆಗೆದುಕೊಂಡು ಹೋಗುವನು. ರೈತನಿಗೆ ಹಬ್ಬ-ಹರಿದಿನಗಳಲ್ಲೂ ಬಿಡುವು ಸಿಗುವುದಿಲ್ಲ. ವಿಶ್ರಾಂತಿ ಅವನಿಗೆ ಕಡಿಮೆ.



ಉರಿಯುವ ಬಿಸಿಲು ಇರಲಿ, ಮೈ ಕೊರೆಯುವ ಚಳಿ ಇರಲಿ, ಇಲ್ಲವೇ ಸುರಿಯುವ ಮಳೆ ಇರಲಿ, ರೈತನ ದುಡಿಮೆ ಮಾತ್ರ ಎಂದಿಗೂ ನಿಲ್ಲದು. ಹಗಲು-ರಾತ್ರಿ ರೈತ ತನ್ನ ಹೊಲದಲ್ಲಿ ದುಡಿಯುವನು. ರೈತ ಬೆಳೆದ ಕಾಳು-ಕಡಿ ತಿಂದು ಹಕ್ಕಿಗಳು ನಲಿಯುವವು. ಅವುಗಳ ಜೊತೆಗೆ ರೈತನೂ ಸಹ ನಲಿಯುವನು. ರೈತನ ಕೆಲಸ ಸತತ ನಡೆದಿರುತ್ತದೆ. ರೈತನ ದುಡಿಮೆಯಿಂದ ಎಲ್ಲ ಜೀವರಾಶಿಗಳು ಬದುಕುತ್ತವೆ.



**ಮಾತನಾಡೋಣ ಬನ್ನಿ:**

1) ರೈತನ ಯಾವ ಗುಣ ನಿಮಗೆ ತುಂಬಾ ಇಷ್ಟ?

2) ನೀವು ಹೊಲಕ್ಕೆ ಹೋಗಿದ್ದಿರಾ?

3) ನಿಮ್ಮ ಕುಟುಂಬದಲ್ಲಿ ಯಾರಾದರೂ ರೈತರಿದ್ದಾರೆಯೆ?

4) ನಿಮಗೆ ಹೊಲದಲ್ಲಿ ಯಾವ ಕೆಲಸ ಮಾಡಲು ಇಷ್ಟ?



**ರೈತನಿಗೆ ಸಂಬಂಧಿಸಿದ ಶಬ್ದಗಳನ್ನು ಬರೆ**




❖ **ಕೊಟ್ಟ, ಪರಿಚ್ಛೇದವನ್ನು ಓದಿ ಪ್ರಶ್ನೆಗಳಿಗೆ ಉತ್ತರ ಹೇಳು.**

ಎತ್ತುಗಳಿಗೆ ಮೇವು ತಿನ್ನಿಸುವನು. ಅವುಗಳ ಜೊತೆಗೆ ತಾನು ನ್ಯಾರಿ ಮಾಡುವನು. ಆಮೇಲೆ ಎತ್ತುಗಳನ್ನು ತೋಟಕ್ಕೆ ತೆಗೆದುಕೊಂಡು ಹೋಗುವನು. ರೈತನಿಗೆ ಯಾವುದೇ ಹಬ್ಬ ಹರಿದಿನಗಳಲ್ಲೂ ಬಿಡುವಿಲ್ಲ, ವಿಶ್ರಾಂತಿಯಂತೂ ಆತನಿಗೆ ಇಲ್ಲವೇ ಇಲ್ಲ ಹಗಲು ರಾತ್ರಿ ರೈತ ತನ್ನ ಹೊಲದ ರಕ್ಷಣೆ ಮಾಡುವನು. ರೈತನ ಪರಿಶ್ರಮದಿಂದ ಎಲ್ಲ ಜೀವರಾಶಿಗಳ ಹೊಟ್ಟೆ ತುಂಬುವುದು.

1) 'ನ್ಯಾರಿ' ಈ ಪದಕ್ಕೆ ನೀವು ಏನು ಹೇಳುವಿರಿ?

2) ರೈತನ ಪರಿಶ್ರಮದಿಂದ ಯಾರ ಹೊಟ್ಟೆ ತುಂಬುವುದು?



## ಯಾರಿವರು? ಎಂಬುದನ್ನು ಗುರುತಿಸು ಮತ್ತು ಬರೆ.



























**ಸೂಚನೆ :** ಶಿಕ್ಷಕರು ಮಕ್ಕಳಿಗೆ ರೈತನಿಗೆ ಸಂಬಂಧಪಟ್ಟ ಶಬ್ದಗಳನ್ನು ಹೇಳಲು ಅವಕಾಶ ಮಾಡಿಕೊಡಿ. ಯೋಗ್ಯ ಶಬ್ದಗಳನ್ನು ಬರೆಯಲು ಹೇಳಿರಿ.

**ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆ ಲೇಸು**

## 15. 



# ಬೀಜ ಹೂವು ಕಾಯಿ



ಬಿತ್ತಿದ ಬೀಜವೇ ಮರೆಯದಿರು
ನೆಲದಲಿ ಮರೆತು ಮಲಗದಿರು
ಮೊಳಕೆ ಒಡೆಯಲು ಹೆದರದಿರು || ಪ ||

ಮೊಗ್ಗು ಹೂವು ನೀನಾಗಿ
ಸುಗಂಧವನು ಹರಡುತಿರು
ರೆಂಬೆಕೊಂಬೆ ಎಲೆಯಾಗಿ
ಕಾಂಡವಾಗಲು ಕಾಯುತಿರು || 1 ||

ದುಂಬಿ ಚಿಟ್ಟೆ ಬಂದರೆ
ಮಕರಂದವನು ನೀಡುತಿರು
ನೆಲದ ಜಲದ ಸತ್ವ
ಕಾಯಿಗಳಿಗೆ ನೀ ಕೊಡುತಿರು || 2 ||

ಕಾಯಿಯಿಂದ ಮತ್ತೆ
ಬೀಜವಾಗಲು ಮರೆಯದಿರು
ವೃಕ್ಷ ಕೋಟಿ ಬೆಳೆಸಿ
ಸದಾ ನೀ ನಲಿಯುತಿರು || 3 ||



### ಮಾತನಾಡೋಣ ಬನ್ನಿ:-

1) ನಿಮ್ಮ ಪರಿಸರದಲ್ಲಿ ಗಿಡಗಳನ್ನು ಹಚ್ಚಿದ್ದೀರಾ?
2) ಯಾವ ಯಾವ ಗಿಡಗಳನ್ನು ಹಚ್ಚಿದ್ದೀರಿ?
3) ಗಿಡಮರಗಳ ಉಪಯೋಗ ಹೇಳಿರಿ.

## ಒಂದೇ ಶಬ್ದದಲ್ಲಿ ಉತ್ತರಿಸು.

1) ಮೊಳಕೆ ಒಡೆಯುವುದು ........................

2) ಸುಗಂಧವನ್ನು ಹರಡುವವು .....................

3) ಮಕರಂದ ಹೀರುವವು.........................

## ಸರಪಳಿ ಪೂರ್ಣಗೊಳಿಸು.




## ಬಿಟ್ಟಸ್ಥಳ ತುಂಬು.

1) ನೆಲದ ಜಲದ .................... ಕಾಯಿಗಳಿಗೆ ನೀ ಕೊಡುತಿರು.

2) .................... ಬೆಳೆಸಿ ಸದಾ ನೀ ನಲಿಯುತಿರು.

3) ಕಾಯಿಯಿಂದ ಮತ್ತೆ ..................... ವಾಗಲು ಮರೆಯದಿರು.

## ವಿಂಗಡಿಸಿ ಬರೆ.

(ಕಿತ್ತಳೆ, ಪಪ್ಪಾಯಿ, ಹಲಸು, ದಾಳಿಂಬೆ, ಬಾಳೆಹಣ್ಣು, ಸ್ಟ್ರಾಬೆರಿ, ಪೇರಲ, ಚಿಕ್ಕು, ಪೇರ, ಸೇಬುಹಣ್ಣು, ಸೀತಾಫಲ, ಕಲ್ಲಂಗಡಿ)

| ಬೀಜ ತೆಗೆದು ತಿನ್ನುವ ಹಣ್ಣುಗಳು | ಬೀಜ ಸಹಿತ ತಿನ್ನುವ ಹಣ್ಣುಗಳು | ಸುಲಿದು ತಿನ್ನುವ ಹಣ್ಣುಗಳು |
|---|---|---|
| | | |

**ಸೂಚನೆ :** ಮಕ್ಕಳಿಂದ ಕವಿತೆಯನ್ನು ಸಾಭಿನಯದೊಂದಿಗೆ ಹಾಡಿಸಿರಿ. ಕವಿತೆಗೆ ಸಂಬಂಧಿಸಿದ ಪ್ರಶ್ನೆ ಕೇಳಿರಿ. ಬೀಜ, ಮೊಳಕೆ, ಮೊಗ್ಗು, ಹೂವು, ಕಾಯಿ ಆಗುವ ಪ್ರಕ್ರಿಯೆಯನ್ನು ವರ್ಣಿಸಿರಿ. ಸಹನೆ ಸಹಕಾರದ ಬಗ್ಗೆ ಚರ್ಚಿಸಿರಿ. ಮರವು ನಮಗೆ ಹೇಗೆ ಉಪಯೋಗವಾಗುವುದು?

**ಮಾತೆಯ ಒಡಲು, ಮಮತೆಯ ಕಡಲು**

# 16. ಅಜ್ಜನ ಜೊತೆ ಹರಟೆ



ಮಗು – ಅಜ್ಜಾ – – – ಅಜ್ಜ ಏನು ಮಾಡುತ್ತಿರುವೆ ?

ಅಜ್ಜ – ಬಾ ಮಗು ಶಾಲೆ ಬಿಟ್ಟಿತೆ ?

ಮಗು – ಅಜ್ಜಾ ನೀನೇನು ಮಾಡುತ್ತಿರುವೆ ?

ಅಜ್ಜ – ಏನಿಲ್ಲ ಮಗು ಹಾಗೆ ಸುಮ್ಮನೆ ಕುಳಿತಿದ್ದೆ. ಹಿಂದಿನದೆಲ್ಲ ನೆನೆಯುತ್ತಿದ್ದೆ.

ಮಗು – ಅಜ್ಜ ನೀವು ಟಿ. ವಿ. ನೋಡುವದಿಲ್ಲ. ಮೊಬೈಲ್ ಕೂಡಾ ಇಲ್ಲ. ಅವುಗಳಿಲ್ಲದೆ ನಿಮಗೆ ಬೇಸರವಾಗುವದಿಲ್ಲವೇ?

ಅಜ್ಜ – ಹಾಗೇನಿಲ್ಲಾ. ಪುಸ್ತಕ ಓದುತ್ತೇನೆ. ಹಳೆಯ ದಿನಗಳನ್ನು ನೆನೆಪಿಸಿಕೊಳ್ಳುತ್ತೇನೆ. ದಿನ ಹೋಗಿದ್ದೇ ತಿಳಿಯುವುದಿಲ್ಲ.

ಮಗು – ಓಹೋ! ನೀವು ನಿಮ್ಮ ಬಾಲ್ಯದಲ್ಲಿ ಆಡಿದ ಆಟಗಳನ್ನು, ಮೋಜಿನ ದಿನಗಳನ್ನು ನೆನಪಿಸಿಕೊಳ್ಳುತ್ತೀರಿ ಅಲ್ಲವೇ?

ಅಜ್ಜ – ಸರಿಯಾಗಿ ಹೇಳಿದೆ ನೋಡು.

ಮಗು – ಅಜ್ಜಾ ನೀವು ಯಾವ–ಯಾವ ಆಟಗಳನ್ನು ಆಡುತ್ತಿದ್ದೀರಿ?

ಅಜ್ಜ– ಕುಂಟೆಬಿಲ್ಲೆ. ಮರಕೋತಿಯಾಟ, ಲಗೋರಿ, ಗೋಲಿಯಾಟ, ಈಜು, ಚಿನ್ನಿದಾಂಡು. ಹಾವು ಏಣಿ ಆಟ, ಚೌಕಾಬಾರ ಒಂದಾ ಎರಡಾ!

ಮಗು – ಅಬ್ಬಾ! ಎಷ್ಟೊಂದು ಆಟಗಳು! ಈ ಎಲ್ಲ ಆಟಿಕೆಗಳು ನಿಮಗೆ ಯಾರು ತಂದು ಕೊಡುತ್ತಿದ್ದರು?



ಅಜ್ಜ – (ನಗುತ್ತ) ಮಗು, ನಮ್ಮ ಆಟಿಕೆಗಳನ್ನು ನಾವೇ ತಯಾರಿಸುತ್ತಿದ್ದೆವು.

ಮಗು – ಅಜ್ಜ ನೀವು ಎಲ್ಲಿ ಈಜುತ್ತಿದ್ದೀರಿ? ನಿಮಗೆ ಯಾರು ಈಜು ಕಲಿಸುತ್ತಿದ್ದರು?

ಅಜ್ಜ – ಹೊಳೆ, ಬಾವಿ, ನದಿಗಳಲ್ಲಿ ಗೆಳೆಯರೊಂದಿಗೆ ಹೋಗಿ ಈಜು ಕಲಿತು ಮೋಜು ಮಾಡುತ್ತಿದ್ದೆವು.

ಮಗು – ಹಾಗಾದರೆ ನೀವು ಬಾಲ್ಯದಲ್ಲಿ ತುಂಬಾ ಮಜಾ ಮಾಡಿದ್ದೀರಿ ಅಲ್ಲವೇ!

ಅಜ್ಜ – ಇಷ್ಟೇ ಅಲ್ಲ ರಸ್ತೆ ಹತ್ತಿರದ, ತೋಟದಲ್ಲಿನ ಹಣ್ಣಿನ ಮರಗಳನ್ನು ಹತ್ತಿ ಹುಣಸೆ, ಬೋರೆಹಣ್ಣು, ಮಾವು, ಪೇರಲ ಹಣ್ಣುಗಳನ್ನು ತಿನ್ನುತ್ತಿದ್ದೆವು.

ಅಜ್ಜ– ಅಜ್ಜ, ಈ ಸಲ ಬೇಸಿಗೆಯ ರಜೆಯಲ್ಲಿ ನನ್ನನ್ನು ಹಳ್ಳಿಗೆ ಕರೆದುಕೊಂಡು ಹೋಗಿರಿ ಅಲ್ಲಿ ನೀವು ಆಡಿದ ಆಟಗಳನ್ನು ಹೇಳಿ ಕೊಡಿರಿ.

ಅಜ್ಜ– ಸರಿ ಹಾಗೇ ಮಾಡೋಣ. ಈಗ ನೀನು ನಿನ್ನ ಗೃಹಪಾಠ ಪೂರ್ಣ ಮಾಡು.

## ಮಾತನಾಡೋಣ ಬನ್ನಿ.

1. ನಿಮ್ಮ ಅಜ್ಜನು  ಧರಿಸುವ ಉಡುಪುಗಳ ಹೆಸರು ಹೇಳಿರಿ?
2. ನಿಮ್ಮ ಅಜ್ಜಿಯ ಮನೆಯಲ್ಲಿ ಮಾಡುವ ತಿನಿಸುಗಳು ಯಾವವು?
3. ನಿನಗೆ ಈಜಾಡಲು ಬರುತ್ತದೆಯೆ ?
4. ಅಜ್ಜನ ಜೊತೆಗೆ ನೀನು ಎಲ್ಲೆಲ್ಲಿ ಸುತ್ತಾಡುವೆ?

## ಆಕೃತಿ ಪೂರ್ಣ ಮಾಡಿರಿ.

| | | |
|---|---|---|
| ______________ | | ಕುಂಟೆಬಿಲ್ಲೆ |
| | ಅಜ್ಜನು ಆಡಿದ ಆಟಗಳು | |
| ______________ | | ______________ |

## ಒಂದೇ ಶಬ್ದದಲ್ಲಿ ಉತ್ತರ ಬರೆ.

1) ಅಜ್ಜ ಏನನ್ನು ನೆನಪಿಸಿಕೊಳ್ಳುತ್ತಾರೆ? ................
2) ಅಜ್ಜ ಏನನ್ನು ಬಳಸುವದಿಲ್ಲ? ................
3) ಮಗು ಯಾರೊಂದಿಗೆ ಮಾತನಾಡುತ್ತಿದ್ದಾನೆ. ................
4) ಅಜ್ಜನ ಆಟಿಕೆಗಳು ಎಲ್ಲಿ ಸಿಗುತ್ತಿರಲಿಲ್ಲ? ................

## ❖ ಸರಿ, ತಪ್ಪು ಹೇಳಿರಿ.

1) ಅಜ್ಜನಿಗೆ ಟಿವ್ಹಿ ಮೊಬೈಲ್ ಅಂದರೆ ಇಷ್ಟ. {............}
2) ಮಗು ಅಜ್ಜನೊಂದಿಗೆ ಹರಟೆ ಹೊಡೆಯುತ್ತಿದೆ. {............}
3) ಅಜ್ಜ ದಿನವಿಡಿ ಬರೀ ಆಟ ಆಡುತ್ತಿದ್ದರು. {............}

## ಕೆಳಗಿನ ಆಟಗಳಲ್ಲಿ ಒಳಾಂಗಣ ಮತ್ತು ಹೊರಾಂಗಣ ಆಟಗಳನ್ನು ವರ್ಗೀಕರಿಸಿ ಬರೆ.










| ಒಳಾಂಗಣ ಆಟಗಳು | ಹೊರಾಂಗಣ ಆಟಗಳು |
|---|---|
| | |

**ಸೂಚನೆ :** ಗ್ರಂಥಾಲಯದಿಂದ ಆಟಗಳ ಪುಸ್ತಕ ಪಡೆದು ಬೇರೆ ಬೇರೆ ಆಟಗಳ ಮಾಹಿತಿ ವಿದ್ಯಾರ್ಥಿಗಳಿಗೆ ಹೇಳಿರಿ. ಪ್ರಕಟವಾಚನ ಮಾಡಿರಿ. ಮಕ್ಕಳಿಂದ ಪ್ರಕಟವಾಚನ ಮಾಡಿಸಿಕೊಳ್ಳಿರಿ. ನಿಮ್ಮ ಅಜ್ಜನ ಹೆಸರು ಏನು ಇದೆ? ನಿಮ್ಮ ಅಜ್ಜ ಚಿಕ್ಕವರಿದ್ದಾಗ ಯಾವ-ಯಾವ ಆಟ ಆಡಿದ್ದಾರೆ ? ಎಂಬುದನ್ನು ಕೇಳು ? ನೀವು ಬೇಸಿಗೆಯ ರಜೆಯಲ್ಲಿ ಯಾವ-ಯಾವ ಆಟ ಆಡುತ್ತೀರಿ? ಇಂತಹ ಪ್ರಶ್ನೆಗಳನ್ನು ಕೇಳಿ ಮಕ್ಕಳಿಗೆ ಮಾತನಾಡಲು ಅವಕಾಶ ಕೊಡಿರಿ. ಮನೆಯಲ್ಲಿ ಹಿರಿಯರಿಗೆ ಆದರ ಕೊಡುವ ಭಾವನೆಯನ್ನು ಬೆಳೆಸಿರಿ.

**ಸಮಯಕ್ಕೊದಗುವ ಬುದ್ಧಿ ನಿಜವಾದ ಬುದ್ಧಿ**

# 17. ಹಸಿರು ಬಟ್ಟಲು

ಒಮ್ಮೆ ಸಂಜೆಯ ಹೊತ್ತಿಗೆ ಸುಜಾತಾ ಅಕ್ಕ ನಮ್ಮೆಲ್ಲರನ್ನು ತಿರುಗಾಡಲು ಕರೆದುಕೊಂಡು ಹೋಗಿದ್ದಳು. ಸುಮಾ, ರಾಹುಲ, ರಾಜು, ರಾಣಿ, ಸಾಹಿಲ ಎಲ್ಲರೂ ಸೈಕಲ್ ತೆಗೆದುಕೊಂಡಿದ್ದರು. ನಾನು ಮತ್ತು ಅಕ್ಕ ಒಂದು ಸೈಕಲ್ ತೆಗೆದುಕೊಂಡು ಹೊರಟೆವು. ನಾವು ಹೋಗುವಾಗ ದಾರಿಯಲ್ಲಿ ಅನೇಕ ಪಕ್ಷಿಗಳ ಚಿಲಿಪಿಲಿ ಧ್ವನಿಯನ್ನು ಕೇಳಿದೆವು. ವಿವಿಧ ಪ್ರಾಣಿ ಮತ್ತು ಪಕ್ಷಿಗಳನ್ನು ಕಂಡೆವು.



ಸುಂದರವಾದ ನಿಸರ್ಗ ಹಚ್ಚ-ಹಸಿರಾಗಿ ಕಾಣುತ್ತಿತ್ತು. ಬಣ್ಣ ಬಣ್ಣದ ಚಿಟ್ಟೆಗಳು ಹಾರಾಡುತ್ತಿದ್ದವು. ಹರಿಯುವ ನದಿಯಲ್ಲಿ ಮೀನುಗಳು ಒಂದರ ಹಿಂದೆ ಒಂದು ಓಟದ ಸ್ಪರ್ಧೆಯಲ್ಲಿ ಭಾಗಿಯಾದಂತೆ ಓಡುತ್ತಿದ್ದವು ಅದನ್ನು ಕಂಡು ತುಂಬಾ ಖುಷಿಯಾಯಿತು.

ಸ್ವಲ್ಪ ದೂರದ ಮೈದಾನದಲ್ಲಿ ನಾವೆಲ್ಲ ಸೈಕಲ್ ಆಡುತ್ತಿದ್ದೆವು. ಆಗ ಅಲ್ಲಿ ನಾಯಿಮರಿಯೊಂದು ಬಿದ್ದುದನ್ನು ಕಂಡು ಗಾಬರಿಯಾಗಿ ಹತ್ತಿರ ಹೋಗಿ ನೋಡಿದೆವು. ಅದು ಅಲುಗಾಡುತ್ತಿರಲಿಲ್ಲ. ಆಗ ನಾವು ಅಕ್ಕನನ್ನು ಕರೆದು ತೋರಿಸಿದೆವು. ಆಗ ಅವಳು ಬೊಗಸೆಯಿಂದ ನೀರು ತರಲು ಪ್ರಯತ್ನಿಸಿದಳು. ಆದರೆ ಬೊಗಸೆಯಲ್ಲಿ ನೀರು ನಿಲ್ಲುತ್ತಿರಲಿಲ್ಲ. ಆಗ ಅಕ್ಕ ಅಲ್ಲಿಯೇ ಇದ್ದ

ಹಲಸಿನ ಮರದ ಎಲೆಗಳಿಂದ ದೊನ್ನೆ ತಯಾರಿಸಿ ಅದರಲ್ಲಿ ನೀರು ತೆಗೆದುಕೊಂಡು ಬಂದಳು. ಮರಾಠಿ ಭಾಷೆಯಲ್ಲಿ ಇದಕ್ಕೆ 'ದ್ರೋಣ' ಎಂದು ಕರೆಯುವರು.



ಅಕ್ಕ ನೀರನ್ನು ತಂದು ನಾಯಿಮರಿಯ ಮುಖದ ಮೇಲೆ ಸಿಂಪಡಿಸಿದಳು, ಅದೇ ದೊನ್ನೆಯಿಂದ ನೀರನ್ನು ಕುಡಿಸಿದಳು. ಆಗ ನಾಯಿಮರಿ ಎಚ್ಚರಗೊಂಡಿತು ಜಿಗಿದಾಡಿತು. ಆಗ ಎಲ್ಲರಿಗೂ ಖುಷಿಯಾಯಿತು.

ಈಗ ಎಲ್ಲರ ಗಮನ ಅಕ್ಕನ ಕೈಯಲ್ಲಿರುವ ದೊನ್ನೆಯ ಕಡೆಗೆ ಹೋಯಿತು. ಎಲ್ಲರೂ ಕೂಡಿ ಅಕ್ಕನಿಗೆ ''ಈ ಹಸಿರು ಬಟ್ಟಲು ನಿನಗೆ ಎಲ್ಲಿ ಸಿಕ್ಕಿತು?'' ಎಂದರು. ಅಕ್ಕ ಹೇಳಿದಳು ಈ ಬಟ್ಟಲನ್ನು ಹಲಸಿನ ಎಲೆಯಿಂದ ತಯಾರಿಸಿದೆ. ನೀವು ಹಲಸಿನ ಎಲೆಗಳನ್ನು ತೆಗೆದುಕೊಳ್ಳಿರಿ. ನಾನು ಮನೆಗೆ ಹೋಗಿ ಈ ಬಟ್ಟಲನ್ನು ತಯಾರಿಸುವುದನ್ನು ಕಲಿಸುವೆ. ಈಗ ನಡೆಯಿರಿ ...... ''ತುಂಬಾ ಹೊತ್ತಾಯಿತು'' ಎಂದಳು. ಎಲ್ಲರೂ ಮನೆಗೆ ಬಂದೆವು.



**ಮಾತನಾಡೋಣ ಬನ್ನಿ.**

1) ಎಲೆಗಳಿಂದ ಏನೇನು ತಯಾರಿಸಬಹುದು ಎಂಬುದನ್ನು ಹೇಳಿರಿ?

2) ಕಾಗದದಿಂದ ತಯಾರಿಸುವ ವಸ್ತುಗಳು ಯಾವವು?



**ಶಬ್ದಕೋಶದ ಸಹಾಯದಿಂದ ಶಬ್ದದ ಅರ್ಥ ಹುಡುಕಿ ಬರೆ.**

1) ದ್ರೋಣ = ______ 2) ನಿಸರ್ಗ - ______ 3) ಬೊಗಸೆ - ______

**ವಿಶೇಷಜ್ಞಾನ** - ಹಸಿರು ಎಲೆಗಳಿಂದ ಮಾಡಿದ ಬಟ್ಟಲಿಗೆ 'ದೊನ್ನೆ' ಎನ್ನುವರು.

## ಪಾಠದಲ್ಲಿ ಬಂದಿರುವ ಮಕ್ಕಳ ಹೆಸರುಗಳನ್ನು ಬರೆಯಿರಿ.

------------------------------------------------------------

## ಕೆಳಗಿನ ಚಿತ್ರ ನೋಡಿ ಹೆಸರಿಸು ಮತ್ತು ಇವುಗಳಲ್ಲಿ ಯಾವುದಾದರೂ ಒಂದನ್ನು ತಯಾರಿಸು.







____________ ____________ ____________ ____________ ____________

## ಉದಾರಹಣೆಯಲ್ಲಿ ತೋರಿಸಿದಂತೆ ಶಬ್ದಗಳನ್ನು ಬರೆಯಿರಿ.

ಉದಾ : ಕ್ಕ – ಅಕ್ಕ

| ಕ್ಕ | ಚ್ಚ | ಣ್ಣ | ಟ್ಟ | ಸ್ವ |
|---|---|---|---|---|
| | | | | |

## ಶಬ್ದ ಗೋಪುರ ತಯಾರಿಸು



ನಾಯಿ

ನಾಯಿ ಓಡುತ್ತದೆ.

ಒಂದು ನಾಯಿ ಓಡುತ್ತದೆ.

ಒಂದು ಕಂದು ನಾಯಿ ಓಡುತ್ತದೆ.



ನದಿ

____________

____________

____________

**ಸೂಚನೆ :** ಮಕ್ಕಳೊಂದಿಗೆ ಪಾಠದ ಸಹಭಾಗಿ ವಾಚನ ಮಾಡಿಸಿಕೊಳ್ಳಿರಿ. ದೊನ್ನೆಯ ಉಪಯೋಗ ತಿಳಿಸಿ ಹೇಳಿರಿ ಮತ್ತು ಯಾವ ಯಾವ ಮರದ ಎಲೆಗಳಿಂದ ದೊನ್ನೆಯನ್ನು ತಯಾರಿಸಬಹುದು ಎಂಬುದನ್ನು ಚರ್ಚಿಸಿರಿ.

**ಮನಸ್ಸಿದ್ದಲ್ಲಿ ಮಾರ್ಗವಿದೆ**

## 18. ನನ್ನ ಶಾಲೆ



ಆಡಿ ಹಾಡಿ ಕೂಡಿ ಕುಣಿದು
ನಕ್ಕು ನಲಿದ ನನ್ನ ಶಾಲೆ
ಗೆಳೆಯರೊಡನೆ ಆಟವಾಡಿ
ಸೋತುಗೆದ್ದ ನನ್ನ ಶಾಲೆ

ಕೂಡಿ ಕುಳಿತು ಊಟ ಮಾಡಿ
ಹಂಚಿ ತಿಂದ ನನ್ನ ಶಾಲೆ
ಚಿತ್ರ ಬಿಡಿಸಿ ವೀಣೆ ನುಡಿಸಿ
ನೃತ್ಯ ಕಲಿಸಿದಂತ ಶಾಲೆ

ಓದಿ ಬರೆದು ಅರಿತು ನಡೆವ
ಬೆಳಕು ಕೊಟ್ಟ ನನ್ನ ಶಾಲೆ
ಲೆಕ್ಕ ಬಿಡಿಸಿ ಜ್ಞಾನ ಉಣಿಸಿ
ಅನ್ನ ಕೊಟ್ಟ ನನ್ನ ಶಾಲೆ

ಅಳತೆ ತೂಕ ಎಣಿಕೆ ಲೆಕ್ಕ
ಹೇಳಿ ಕೊಟ್ಟ ನನ್ನ ಶಾಲೆ
ಶಿಸ್ತು ಸಮತೆ ಅರಿವು ನೀಡಿ
ಬದುಕು ಕೊಟ್ಟ ನನ್ನ ಶಾಲೆ

– ಬಾಪು ಖಾಂಡೆ



**ಮಾತನಾಡೋಣ ಬನ್ನಿ.**

1) ನಿನಗೆ ನಿಮ್ಮ ಶಾಲೆ ಏಕೆ ಇಷ್ಟ?

2) ನೀನು ಶಾಲೆಯಲ್ಲಿ ಯಾವ ಯಾವ ಆಟ ಆಡುವೆ?

**ಉದಾಹರಣೆಯಲ್ಲಿ ತೋರಿಸಿದಂತೆ ಪದ್ಯದಲ್ಲಿಯ ಪ್ರಾಸಯುಕ್ತ ಪದಗಳನ್ನು ಹುಡುಕಿ ಬರೆಯಿರಿ**

**ಉದಾಹರಣೆ:** ಆಡಿ – ಹಾಡಿ

1 ....................

2 ....................

3 ....................

4 ....................

**ಉದಾಹರಣೆಯಲ್ಲಿ ತೋರಿಸಿದಂತೆ ಕೃತಿ ಪೂರ್ಣ ಮಾಡು.**

1) ವೀಣೆ– ನುಡಿಸುವುದು

2) ಕೊಳಲು ....................

3) ತಬಲಾ ....................

4) ತಾಳ ....................

**ಶಾಲೆಯ ಕುರಿತು ಐದು ವಾಕ್ಯಗಳ ಶ್ರುತಲೇಖನ ಮಾಡಿಸಿಕೊಳ್ಳಿರಿ.**

..........................................................................................

..........................................................................................

..........................................................................................

..........................................................................................

..........................................................................................



**ಕವಿತೆಯ ಸಾಲುಗಳನ್ನು ಪೂರ್ಣಗೊಳಿಸು.**

ಕೂಡಿ ಕುಳಿತು ಊಟ ಮಾಡಿ

ಹಂಚಿ ತಿಂದ ನನ್ನ ಶಾಲೆ

____________________

____________________

❖ **ನಿಮ್ಮ ಮನೆ ಹಾಗೂ ಶಾಲೆಯಲ್ಲಿ ನೀವು ಯಾವ ತಂತ್ರಜ್ಞಾನದ ಉಪಕರಣಗಳನ್ನು ಬಳಸುತ್ತೀರಿ ಎಂಬುದನ್ನು ಬರೆ.**

.....................................................................

.....................................................................

❖ **ಕೆಳಗಿನ ಚಿತ್ರದಲ್ಲಿ ರಾಜುವಿಗೆ ಶಾಲೆಗೆ ಹೋಗಲು ಸರಿಯಾದ ದಾರಿಯನ್ನು ತೋರಿಸು.**



**ಸೂಚನೆ :** ಮಕ್ಕಳಿಂದ ಕವಿತೆಯನ್ನು ಸಾಭಿನಯದೊಂದಿಗೆ ಹಾಡಿಸಿಕೊಳ್ಳಿರಿ. ಕವಿತೆಯ ಆಧಾರಿತ ಪ್ರಶ್ನೆ ಕೇಳಬೇಕು. ಶಾಲೆಯಲ್ಲಿಯ ಅನುಭವವನ್ನು ಮಕ್ಕಳಿಂದ ಕೇಳಿಸಿಕೊಳ್ಳಿರಿ. ನಿನಗೆ ಇಷ್ಟವಾದ ಕವಿತೆ ಯಾವುದು? ಇಂತಹ ಪ್ರಶ್ನೆಗಳನ್ನು ಕೇಳಿ ಮಕ್ಕಳ ಅನುಭವ ಪಡೆಯಿರಿ.

# ಚಿತ್ರಕಥೆ - ಇರುವೆ ಮತ್ತು ಮಿಡತೆ









**ಸೂಚನೆ :** ವಿದ್ಯಾರ್ಥಿಗಳಿಗೆ ಚಿತ್ರಕಥೆಯಲ್ಲಿಯ ಚಿತ್ರಗಳನ್ನು ಕ್ರಮವಾಗಿ ನಿರೀಕ್ಷಣೆ ಮಾಡಲು ಹೇಳಿರಿ. ಪ್ರತಿಯೊಂದು ಚಿತ್ರದಲ್ಲಿ ಕಾಣಿಸುವ ಪ್ರಸಂಗ ಪಾತ್ರ ಮತ್ತು ಕೃತಿ ಇವುಗಳ ಕುರಿತು ಮುಕ್ತವಾಗಿ ವಿಚಾರ ಮಾಡಲು ಮತ್ತು ಅಭಿಪ್ರಾಯ ವ್ಯಕ್ತ ಮಾಡಲು ಅವಕಾಶ ಕೊಡಿರಿ. ಅವರ ಕಲ್ಪನೆ ಸ್ವೀಕರಿಸಿರಿ. ಕಲ್ಪಕ ಮತ್ತು ಸೃಜನಶೀಲ ವಿಚಾರ ವ್ಯಕ್ತ ಮಾಡುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸಬೇಕು. ಓದಲು ಇಂತಹ ಅನೇಕ ಪ್ರಕಾರದ ಪುಸ್ತಕಗಳನ್ನು ಉಪಲಬ್ದ ಮಾಡಿ ಕೊಡಬೇಕು ಮತ್ತು ಅವುಗಳ ವಾಚನ ಮಾಡಿಸಿಕೊಳ್ಳಬೇಕು. ವಿದ್ಯಾರ್ಥಿಗಳಿಗೆ ಬೇರೆ ಬೇರೆ ಪಾತ್ರಗಳನ್ನು ಕೊಟ್ಟು ಸ್ವತಃ ಕಥೆ ತಯಾರಿಸಲು ಹೇಳಿರಿ.

# 19. ಪುಟ್ಟ - ಪುಟ್ಟಿಯ ಪ್ರವಾಸ

(ಅಂದು ರವಿವಾರ. ಪುಟ್ಟ - ಪುಟ್ಟಿ ಎಂದಿನಂತೆ ಬೇಗ ಎದ್ದರು. ಇಬ್ಬರೂ ತುಂಬಾ ಖುಷಿಯಲ್ಲಿದ್ದರು. ಏಕೆ ಗೊತ್ತಾ? ಅಂದು ಅವರು (ಮಕ್ಕಳು) ಅಪ್ಪ ಅಮ್ಮನ ಜೊತೆಗೆ ಬಸ್ಸಿನಲ್ಲಿ ಪ್ರವಾಸ ಮಾಡುವವರಿದ್ದರು).

**ಪುಟ್ಟ:** ಅಪ್ಪ, ನಾವೆಲ್ಲಿಗೆ ಹೋಗುತ್ತಿದ್ದೇವೆ?

**ಅಪ್ಪ:** ಪುಟ್ಟ, ನಾವು ಮೃಗಾಲಯಕ್ಕೆ ಹೋಗುತ್ತಿದ್ದೇವೆ.

**ಪುಟ್ಟಿ:** ಓ ಹೌದಾ! ಅಲ್ಲಿ ಏನಿರುತ್ತವೆ?

**ಅಮ್ಮ:** ಅಲ್ಲಿ ವಿಧವಿಧ ಪ್ರಾಣಿಗಳು ಇರುತ್ತವೆ.

ಅಲ್ಲಿಗೆ ಅಷ್ಟರಲ್ಲಿ ಬಸ್ಸು ಬರುತ್ತದೆ.....



**ಅಪ್ಪ:** ಕಂಡಕ್ಟರ್ ಸಾಹೇಬರೇ, ಶಿಕಾರಿಪುರಕ್ಕೆ **ಎರಡು** ಪೂರ್ಣ, **ಎರಡು** ಅರ್ಧ ತಿಕೀಟು ಕೊಡಿ.

**ಕಂಡಕ್ಟರ್:** ಓ ಮೃಗಾಲಯಕ್ಕೆ ಹೋಗುತ್ತಿದ್ದೀರಾ? ಸರಿ ಕೊಡ್ತೇನೆ.

**ಪುಟ್ಟ:** ಅಮ್ಮ, ಏನಿದು **ಎರಡು ಪೂರ್ಣ, ಎರಡು ಅರ್ಧ**?

**ಅಮ್ಮ:** ಅದಾ, ದೊಡ್ಡವರಿಗೆ **ಪೂರ್ಣ**, ಚಿಕ್ಕವರಿಗೆ ಅರ್ಧ ತಿಕೀಟು ದರ ತೆಗೆದುಕೊಳ್ಳುತ್ತಾರೆ.

**ಪುಟ್ಟ:** ಅಪ್ಪ, ಕಂಡಕ್ಟರ್ ಅಂಕಲ್‌ಗೆ **ನೂರು** ರೂಪಾಯಿಗಳನ್ನು ಕೊಟ್ಟೆಯಾ?



**ಅಪ್ಪ:** ಹೌದು, **ನೂರು** ರೂಪಾಯಿಗಳನ್ನು ತೆಗೆದುಕೊಂಡು **ನಲವತ್ತು** ರೂಪಾಯಿಗಳನ್ನು ಮರಳಿ ಕೊಟ್ಟರು.

**ಪುಟ್ಟಿ:** ಕಂಡಕ್ಟರ್ ಅಂಕಲ್, ಮೃಗಾಲಯ ತುಂಬಾ **ದೂರ**ವಿದೆಯೇ?

**ಕಂಡಕ್ಟರ್:** ಇಲ್ಲ ಮಗು, **ಇಪ್ಪತ್ತೈದರಿಂದ ಮೂವತ್ತು** ನಿಮಿಷ ಅಷ್ಟೆ.

**ಪುಟ್ಟಿ:** ಅಂದರೆ ನನಗೆ ಗೊತ್ತಾಗಲಿಲ್ಲಾ.

**ಪುಟ್ಟ:** ಅಯ್ಯೋ, ಅಮ್ಮ ಮಾರುಕಟ್ಟೆಗೆ ಹೋಗಿ ಬರಲು ಬೇಕಾಗುವಷ್ಟು ಸಮಯ.

**ಪುಟ್ಟಿ:** ಅಷ್ಟೇನಾ? ಗೊತ್ತಾಯ್ತು, **ಸಮೀಪವೇ** ಇದೆ.



ಮೃಗಾಲಯದಲ್ಲಿ.....

**ಪುಟ್ಟಿ:** ಅಬ್ಬಾ! ಆನೆಯಣ್ಣ ನೀನು ಎಷ್ಟೊಂದು ದೊಡ್ಡವನಾಗಿರುವೆ?

**ಆನೆ:** ಹೌದು ನಾನು **ದೊಡ್ಡ** ಪ್ರಾಣಿ, ನನ್ನ ಊಟ ತುಂಬ **ಜಾಸ್ತಿ**.

**ಪುಟ್ಟ:** ಅಗೋ ಅಲ್ಲಿ ನೋಡು ಜಿರಾಫೆ.

**ಪುಟ್ಟಿ:** ಓ ಜಿರಾಫೆ, ನಿನ್ನ ಕುತ್ತಿಗೆ ಏಕೆ ಅಷ್ಟು **ಉದ್ದ**?

**ಜಿರಾಫೆ:** ಯಾಕೆಂದರೆ ನನಗೆ ಮರದ ಎಲೆಗಳು ಇಷ್ಟ.

**ಅಪ್ಪ:** ಮಕ್ಕಳೇ ಅಲ್ಲಿ ನೋಡಿ ನವಿಲು.

**ಮಕ್ಕಳು:** ಓ ನವಿಲೇ, ನೀನು **ಕೆಳಗೆ** ಇರುವಾಗ ನಿನಗೆ ರೆಕ್ಕೆ ಏಕೆ?

**ನವಿಲು:** ಏಕೆಂದರೆ, ನಾನು **ಮೇಲೆ** ಹಾರುವೆ.

**ಮಕ್ಕಳು:** ಅಪ್ಪ, ಇಲ್ಲಿ ಎಷ್ಟೊಂದು ಬಣ್ಣ ಬಣ್ಣದ ಪ್ರಾಣಿ, ಪಕ್ಷಿಗಳು ಅವುಗಳನ್ನು ನೋಡಿ ನಮಗೆ ತುಂಬಾ ಖುಷಿಯಾಯಿತು.





### ಮಾತನಾಡೋಣ ಬನ್ನಿ.

- ಯಾರು ಯಾರು ದೂರದ ಪ್ರವಾಸ ಮಾಡಿರುವಿರಿ?
- ನೀವು ನೋಡಿದ ದೊಡ್ಡ ಪ್ರಾಣಿ ಯಾವುದು?



### ಕೆಳಗಿನ ಶಬ್ದಗಳ ಅರ್ಥವನ್ನು ಶಬ್ದಕೋಶದಲ್ಲಿ ಹುಡುಕಿ ಬರೆ.



ಮೃಗಾಲಯ – ________ ಪ್ರವಾಸ– ________ ಮಾರುಕಟ್ಟೆ – ________



### ಕಂಸದಲ್ಲಿ ಕೊಟ್ಟ ವಿರಾಮ ಚಿಹ್ನೆಗಳನ್ನು ಉಪಯೋಗ ಮಾಡು. (.?)

ಅ) ಮೃಗಾಲಯ ತುಂಬಾ ದೂರವಿದೆಯೇ

ಬ) ಇಬ್ಬರೂ ತುಂಬಾ ಖುಷಿಯಲ್ಲಿದ್ದರು

ಕ) ಅಲ್ಲಿ ವಿಧವಿಧ ಪ್ರಾಣಿಗಳು ಇರುತ್ತವೆ

ಡ) ಓ ಮೃಗಾಲಯಕ್ಕೆ ಹೋಗುತ್ತಿದ್ದೀರಾ



### ಗುಂಪಿಗೆ ಸೇರದ ಪದಕ್ಕೆ ಗೋಲು ◯ ಹಾಕು.

ಅ) ಹುಲಿ, ಸಿಂಹ, ಜಿರಾಫೆ, ನವಿಲು

ಬ) ಗಿಳಿ, ಕಾಗೆ, ಆನೆ, ಗುಬ್ಬಿ

❖ **ಕೊಟ್ಟ ಪರಿಚ್ಛೇದವನ್ನು ಓದಿ ಪ್ರಶ್ನೆಗಳಿಗೆ ಉತ್ತರ ಹೇಳು.**

ಪುಟ್ಟ : ಅಪ್ಪಾ ಕಂಡಕ್ಟರ್‌ಗೆ ನೂರು ರೂಪಾಯಿಗಳನ್ನು ಕೊಟ್ಟೆಯಾ?

ಅಪ್ಪ : ಹೌದು, ನೂರು ರೂಪಾಯಿಗಳನ್ನು ತೆಗೆದುಕೊಂಡು ನಲವತ್ತು ರೂಪಾಯಿಗಳನ್ನು ಮರಳಿ ಕೊಟ್ಟರು.

ಪುಟ್ಟಿ : ಕಂಡಕ್ಟರ್ ಅಂಕಲ್, ಮೃಗಾಲಯ ತುಂಬಾ ದೂರವಿದೆಯೇ?

ಕಂಡಕ್ಟರ್ : ಇಲ್ಲ ಮಗು, ಇಪ್ಪತ್ತೈದರಿಂದ ಮೂವತ್ತು ನಿಮಿಷ ಅಷ್ಟೇ.

1) ಅಪ್ಪ ಕಂಡಕ್ಟರ್‌ಗೆ ಎಷ್ಟು ರೂಪಾಯಿ ಕೊಟ್ಟರು?

2) ಮೃಗಾಲಯಕ್ಕೆ ಹೋಗಲು ಎಷ್ಟು ಸಮಯ ಬೇಕು?

❖ **ಪುಟ್ಟ - ಪುಟ್ಟಿಯ ಪ್ರವಾಸ ಓದಿದ್ದೀರಿ. ನಿಮ್ಮ ತಂದೆ ತಾಯಿಯ ಜೊತೆಗೆ ಪ್ರವಾಸಕ್ಕೆ ಹೋದ ಅನುಭವದ ಬಗ್ಗೆ ಬರೆಯಲು ಪ್ರಯತ್ನ ಮಾಡಿ.**

ನೀವು ಹೀಗೆ ಪ್ರಾರಂಭಿಸಬಹುದು.

ನಾನು ನನ್ನ ತಂದೆ ತಾಯಿಯ ಜೊತೆಗೆ ಒಮ್ಮೆ ............ ಹೋಗಿದ್ದೆ.

..........................................................................

..........................................................................

..........................................................................

..........................................................................

..........................................................................

..........................................................................

**ದೇಶ ಸುತ್ತು ಕೋಶ ಓದು**

# 20. ಪ್ರಾಣಿಗಳ ಗೆಳೆತನ

ಹುಲಿ :- ಯಾರದು? ನನ್ನ ಕೊಳದಲ್ಲಿ ನೀರನ್ನು ಕುಡಿಯುತ್ತಿರುವುದು? ಹಾಗಾದರೆ ಇಂದು ನೀವೆಲ್ಲ ನನ್ನ ಆಹಾರ.



ನರಿ :- ಅಯ್ಯೋ....! ಬೇಡ ಬೇಡ.

ಹುಲಿ :- ಹಾಗಾದರೆ ದಿನಕ್ಕೆ ಒಬ್ಬರಂತೆ ಆಹಾರವಾಗಿ ನನ್ನ ಗುಹೆಗೆ ಕಳುಹಿಸು.

ನರಿ :- ನಾನು ಕರೆತರುವೆ, ಯೋಚಿಸಬೇಡ,



ಹುಲಿ :- ಆಯಿತು, ಈ ಕೆಲಸ ನಿನಗೆ ಒಪ್ಪಿಸುವೆ. ಇಲ್ಲವಾದರೆ ಅಷ್ಟೇ.....

ನರಿ :- ಹುಲಿಯ ಬಳಿ ಯಾರು ಹೋಗುವಿರಿ..... ಹೇಳಿ... ಹೇಳಿ?

(ಪ್ರಾಣಿಗಳೆಲ್ಲಾ ಒಬ್ಬರ ಮುಖವನ್ನು ಒಬ್ಬರು ನೋಡುತ್ತಾ ಮೌನವಾಗಿ ಸಂಕಟಪಡುತ್ತಿದ್ದವು)

ನರಿ :- ಮೊಲವೇ...! ಈ ದಿನ ನೀನು ಆಹಾರವಾಗಿ ಹುಲಿಯ ಗುಹೆಗೆ ಹೋಗು.

ಜಿಂಕೆ :- ಬೇಡ, ಮೊಲ ಚಿಕ್ಕಪ್ರಾಣಿ ನಾನು ಹೋಗುತ್ತೇನೆ.



ಕರಡಿ :- ನೀವಿಬ್ಬರೂ ಬೇಡ, ನಾನು ಹೋಗುತ್ತೇನೆ, ನಿಮಗಿಂತ ನಾನೇ ದೊಡ್ಡ ಪ್ರಾಣಿ. (ಹೀಗೆ ಒಬ್ಬರ ನಂತರ ಒಬ್ಬರು ಹೇಳತೊಡಗಿದರು. ಇವರ ಸಂಕಟವನ್ನು ಅರಿತು ನರಿಯು ಒಂದು ಉಪಾಯವನ್ನು ಹೇಳಿತು. ಎಲ್ಲ ಪ್ರಾಣಿಗಳು ಒಟ್ಟಾಗಿ ಹುಲಿಯ

ಬಳಿಗೆ ಹೋದವು)



ಹುಲಿ :- ನರಿಯೇ ಏಕೆ ಪ್ರಾಣಿಗಳೆಲ್ಲಾ ಒಟ್ಟಾಗಿ ಬಂದಿರುವಿರಲ್ಲಾ ? ನನಗೆ ಹಸಿವೆಯಾಗುತ್ತಿದೆ ಯಾರನ್ನು ತಿನ್ನಲಿ?

ನರಿ :- ನನಗೂ ತಿಳಿಯದಾಗಿದೆ. ಅವರನ್ನೇ ಕೇಳು. (ಕರಡಿಯು ಮುಂದೆ ಬರುತ್ತದೆ)

ಕರಡಿ :- ನಾವು ಯಾರೂ ಒಬ್ಬರನ್ನೊಬ್ಬರು ಅಗಲಿ ಇರಲಾರೆವು. ನನ್ನನ್ನೇ ಮೊದಲು ತಿಂದು ಬಿಡು, ಎಂದು ಜೋರಾಗಿ ಕೂಗಿತು.

ಹುಲಿಯು ಪ್ರಾಣಿಗಳ ಪ್ರೀತಿ, ಗೆಳೆತನ, ಒಗ್ಗಟ್ಟನ್ನು ನೋಡಿ ಸಂತಸಪಟ್ಟಿತು. ನಾವೆಲ್ಲರೂ ಗೆಳೆಯರಾಗಿ ಇರೋಣ ಎಂದು ಹೇಳಿ ಹುಲಿಯು ಹೊರಟು ಹೋಯಿತು.

## ಮಾತನಾಡೋಣ ಬನ್ನಿ.

1) ಈ ಕಥೆಯಲ್ಲಿ ನಿನಗೆ ಯಾವ ಪ್ರಾಣಿ ಇಷ್ಟವಾಯಿತು? ಏಕೆ?

2) ಈ ಕಥೆಯಲ್ಲಿ ನಿನಗೆ ಯಾವ ಪ್ರಾಣಿ ಇಷ್ಟವಾಗಲಿಲ್ಲ? ಏಕೆ?

3) ನಿನಗೆ ತಿಳಿದಿರುವ ಇನ್ನೂ ನಾಲ್ಕು ಕಾಡು ಪ್ರಾಣಿಗಳ ಹೆಸರು ಹೇಳು.

## ಸರಿಯಾಗಿ ಹೊಂದಿಸು.

| | |
|---|---|
| ಹುಲಿಯ | ಒಗ್ಗಟ್ಟು |
| ನರಿಯ | ಕೊಳ |
| ಪ್ರಾಣಿಗಳ | ಚಿಕ್ಕಪ್ರಾಣಿ |
| ನೀರಿನ | ಗುಹೆ |
| ಮೊಲ | ಉಪಾಯ |

**ನೀನು ನೀರನ್ನು ಎಲ್ಲೆಲ್ಲಿ ನೋಡಿರುವೆ? ಹೇಳು ಮತ್ತು ಬರೆ.**

ಉದಾ :- ಬಾವಿ ............., ............., ............., .............,
.............,

**ಸರಿ ಉತ್ತರಕ್ಕೆ ಗೋಲು (◯) ಹಾಕು.**

1) ನೀರಿನ ಕೊಳ ಯಾರದಾಗಿತ್ತು?
(ನರಿ, ಹುಲಿ, ಕರಡಿ)

2) ಹುಲಿಯ ಬಳಿ ಯಾರು ಹೋಗುವಿರಿ ಎಂದು ಯಾರು ಕೇಳಿದರು?
(ಜಿಂಕೆ, ನರಿ, ಮೊಲ)

3) 'ಮೊಲ ಚಿಕ್ಕ ಪ್ರಾಣಿ' ಎಂದು ಯಾರು ಹೇಳಿದರು?
(ಕರಡಿ, ನರಿ, ಜಿಂಕೆ)

4) 'ನಾನೇ ದೊಡ್ಡ ಪ್ರಾಣಿ' ಎಂದು ಯಾರು ಹೇಳಿದರು?
(ಹುಲಿ, ಕರಡಿ, ನರಿ)

**ಹೂವಿನಲ್ಲಿಯ ಶಬ್ದಗಳನ್ನು ಯೋಗ್ಯ ಸ್ಥಳದಲ್ಲಿ ತುಂಬಿ ಕೆಳಗಿನ ಪರಿಚ್ಛೇದ ಪೂರ್ಣ ಮಾಡಿರಿ.**




ಕೊಳದಲ್ಲಿ ಒಂದು .............. ವಾಸಿಸುತ್ತಿತ್ತು. ಕೊಳದ ಬಳಿ ಒಂದು .............. ಮರ ಇತ್ತು .............. ದಿನಾಲು ಆ ಮರದ ಕೆಳಗೆ ಬರುತ್ತಿತ್ತು. ಒಂದು ದಿನ ಆಮೆಗೆ ನೇರಳೆ ಹಣ್ಣು ತಿನ್ನುವ .............. ಆದು ಮರ ಏರಲು .............. ಮಾಡಿತು.



**ಕೆಳಗಿನ ಮಕ್ಕಳ ಮುಖದ ಚಿತ್ರವನ್ನು ನೋಡಿ ಆಯಾ ಭಾವನೆಗಳನ್ನು ಗುರುತಿಸಿ ಬರೆ.**






**ಕೆಳಗಿನ ಪ್ರಾಣಿಗಳು ಯಾವ ಗುಂಪಿನಲ್ಲಿ ಸೇರುವವು ಎಂಬುದನ್ನು ಬರೆ.**

(ಕರಡಿ, ನಾಯಿ, ಬೆಕ್ಕು, ಗಿಳಿ, ಆನೆ, ಜಿರಾಫೆ, ಸಿಂಹ, ಜಿಂಕೆ, ಕಾಗೆ, ನರಿ, ನೊಣ, ಕತ್ತೆ, ಕಪ್ಪೆ, ದುಂಬಿ, ಆಕಳು, ಎಮ್ಮೆ, ಆಡು, ಹಲ್ಲಿ, ಅಳಿಲು, ಓತಿಕಾಟ, ಒಂಟೆ, ಇರುವೆ, ಸೊಳ್ಳೆ, ಹುಲಿ, ಪಾರಿವಾಳ, ಇಲಿ, ಜಿರಳೆ, ನವಿಲು, ಚಿಟ್ಟೆ)

| ಪ್ರಾಣಿಗಳು | ಕೀಟಕಗಳು | ಪಕ್ಷಿಗಳು |
|---|---|---|
| | | |



**ಈ ಕಥೆಯನ್ನು ನಾಟಕ ರೂಪದಲ್ಲಿ ಅಭಿನಯಿಸಿ ತೋರಿಸಿರಿ.**

**ಸೂಚನೆ :** ವಿದ್ಯಾರ್ಥಿಗಳಿಗೆ ಕಥೆಯಲ್ಲಿಯ ಸಂಭಾಷಣೆ ಕೇಳಿಸಿ, ಪ್ರಾಣಿಗಳ ಧ್ವನಿಯ ಪರಿಚಯ ಮಾಡಿಸಿರಿ. ಮಕ್ಕಳು ಸ್ವತಃ ಕಥೆ ಹೇಳುವಂತೆ ಪ್ರೋತ್ಸಾಹಿಸಬೇಕು. ವಾಚನ ಸಲುವಾಗಿ ವಿವಿಧ ಕಥೆ ಪುಸ್ತಕಗಳನ್ನು ಉಪಲಬ್ಧ ಮಾಡಿಕೊಡಬೇಕು. ಕಥೆಯನ್ನು ಸಹಭಾಗಿ ವಾಚನ ಮಾಡಿಸಿಕೊಳ್ಳಬೇಕು. ಪ್ರಾಣಿ ಪಕ್ಷಿಗಳ ಕಥೆಗಳು ಇರುವ ಪಂಚತಂತ್ರ ಪುಸ್ತಕಗಳನ್ನು ಓದಲು ಒದಗಿಸಿಕೊಡಿರಿ.

**ಒಗ್ಗಟ್ಟಿನಲ್ಲಿ ಬಲವಿದೆ**

21. 

# ನಾನೇಕೆ ಹಾರಲಾರೆ



ಆಕಾಶದಿ ಪಕ್ಷಿಗಳು ನೋಡಲ್ಲಿ
ಗಾಳಿಪಟ ಹಾರುತಿವೆ ದಿಗಂತದಲ್ಲಿ
ವಿಮಾನವು ಹಾರುತಿದೆ ಗಗನದಲ್ಲಿ
ನಾನು ಯಾಕೆ ಹಾರಲಾರೆ ಹೇಳಮ್ಮಾ?

ಬಟ್ಟೆಗಳು ಹಾರುತಿವೆ ಹಿತ್ತಲಲ್ಲಿ
ಕಾಗದಗಳು ಚದುರಿ ಓಡಿ ಹೋದುವೆಲ್ಲಿ
ಕೈಯಲಿದ್ದ ಹಿಂಜಿದ ಹತ್ತಿ ಹಾರಿದವೆಲ್ಲಿ
ನಾನು ಯಾಕೆ ಹಾರಲಾರೆ ಹೇಳು ಅಮ್ಮಾ?

ನನ್ನ ಮುದ್ದು ಕಂದ ನಿನಗೆ ಗೊತ್ತಿಲ್ಲವೆ
ನಿನ್ನ ಮೈಗೆ ಸೋಕುವ ಗಾಳಿ ಹಗುರಲ್ಲವೆ.
ಭಾರವಾದ ವಸ್ತು ಎಂದೂ ಹಾರಲಾರದು
ಅದಕೆ ನೀನು ಗಾಳಿಯಲ್ಲಿ ಹಾರಲಾಗದು.





## ಮಾತನಾಡೋಣ ಬನ್ನಿ.

1) ನೀನು ಪಕ್ಷಿಯಾಗಿದ್ದರೆ ಏನೇನು ಮಾಡುವೆ?

2) ಗಾಳಿ ಇಲ್ಲದಿದ್ದರೆ ಏನಾಗಬಹುದು?



## ಶಬ್ದಕೋಶದಿಂದ ಶಬ್ದದ ಅರ್ಥ ಹುಡುಕಿ ಬರೆ.



1) ದಿಗಂತ = ____________ 2) ಹಿತ್ತಲ = ____________



## ಕೆಳಗಿನ ಪದಗಳ ಸಮಾನಾರ್ಥಕ ಶಬ್ದವನ್ನು ಬರೆ.

1 ಪಕ್ಷಿ = 2) ಕಂದ = 3) ಗಾಳಿ =

4) ಆಕಾಶ = 5) ಹಿತ = 6) ಹಿಂಜಿದ =

❖ **ಕವಿತೆ ಪೂರ್ಣ ಮಾಡು.**



**ನಮಿಸುವೆನು**

ನಮಿಸುವೆನು ನಾನು ನಮಿಸುವೆನು
ನಮಿಸುವೆನು ನಾನು ನಮಿಸುವೆನು ॥ಪ॥
ನನಗೆ ಜನ್ಮ ನೀಡಿದ ತಾಯಿಗೆ
ನಮಿಸುವೆನು ನಾನು ನಮಿಸುವೆನು
ಬದುಕಿನ ದಾರಿ ಹೇಳಿದ ತಂದೆಗೆ
ನಮಿಸುವೆನು ನಾನು ನಮಿಸುವೆನು ॥ 1 ॥



**ಗುರು, ರೈತ, ಸೈನಿಕ, ವೈದ್ಯ ಈ ಶಬ್ದಗಳನ್ನು ಉಪಯೋಗಿಸಿ ಕೆಳಗಿನ ಕವಿತೆಯ ಸಾಲುಗಳನ್ನು ಪೂರ್ಣ ಮಾಡು.**



ನನಗೆ ಜ್ಞಾನಾಮೃತ ಉಣಿಸಿದ ಗುರುವಿಗೆ
-------------------------
ನನಗೆ ಅನ್ನ ನೀಡಿದ ರೈತನಿಗೆ
------------------------- ॥ 2 ॥





-------------------------
ನಮಿಸುವೆನು ನಾನು ನಮಿಸುವೆನು
-------------------------
ನಾನು ನಮಿಸುವೆನು ನಾನು ನಮಿಸುವೆನು ॥ 3 ॥



**ಸೂಚನೆ :** ಮಕ್ಕಳಿಗೆ ಕವಿತೆಯನ್ನು ಪೂರ್ಣಮಾಡಲು ಸಹಾಯ ಮಾಡಿರಿ. ಕವಿತೆ ರಚನೆ ಮಾಡಲು ಪ್ರೋತ್ಸಾಹಿಸಿರಿ. ಪ್ರಾಸಯುಕ್ತ ಪದ ರಚನೆಗೆ ಸಹಾಯ ಮಾಡಿರಿ. ಉದಾ: ರಪ-ರಪ, ತಪ,ತಪ, ಜುಳು-ಜುಳು, ಸರ-ಸರ, ಇತ್ಯಾದಿ.

**ಅರಿವೇ ಗುರು**

# 22. ಗೋಪಿ ಕಲಿತ ಪಾಠ

ಒಂದೂರಿನಲ್ಲಿ ಗೋಪಿ ಎನ್ನುವ ಬಾಲಕನಿದ್ದನು. ಗೋಪಿ ತುಂಟ ಹಾಗೂ ಮುದ್ದಾದ ಬಾಲಕ. ಜಾಣ ಗೋಪಿ ಅಷ್ಟೇ ಮುದ್ದಾಗಿ ಮಾತನಾಡುತ್ತಿದ್ದ. ಗೋಪಿ ಮನೆಯಲ್ಲಿ ಎಲ್ಲರಿಗೂ ಅಚ್ಚುಮೆಚ್ಚಿನವನಾಗಿದ್ದನು.



ಗೋಪಿಗೆ ಬಾಳೆಹಣ್ಣು ಅಂದರೆ ಪಂಚಪ್ರಾಣ. ದಿನವಿಡೀ ಕೊಟ್ಟರೂ ಬೇಡವೆನ್ನದೇ ತಿನ್ನುತ್ತಿದ್ದನು. ಆದರೆ ಅವನಿಗೆ ಒಂದು ಕೆಟ್ಟ ಅಭ್ಯಾಸವಿತ್ತು. ಅದೇನೆಂದರೆ ಬಾಳೆಹಣ್ಣನ್ನು ತಿಂದು ಸಿಪ್ಪೆಯನ್ನು ಎಲ್ಲಾ ಕಡೆ ಎಸೆಯುತ್ತಿದ್ದನು. ಮನೆಯವರೆಲ್ಲ ಅವನ ಈ ಅಭ್ಯಾಸದಿಂದ ಬೇಸತ್ತಿದ್ದರು. ಎಲ್ಲರೂ ತಿಳಿಸಿ ಹೇಳಿದರು, ಗದರಿಸಿ ಹೇಳಿದರು, ಕೊನೆಗೆ ಅಮ್ಮ ಎಷ್ಟೊಂದು ಹೇಳಿದರು. ಅವನಲ್ಲಿ ಬದಲಾವಣೆ ಆಗಲಿಲ್ಲ.

ಒಂದು ದಿನ ಗೋಪಿ ಬಾಳೆಹಣ್ಣು ತಿನ್ನುತ್ತಾ ಮನೆಯ ಮುಂದೆ ಓಡಾಡುತ್ತಿದ್ದನು. ಹಣ್ಣಿನ ಸಿಪ್ಪೆಯನ್ನು ಸುಲಿದು ಎಸೆದನು. ಹಣ್ಣನ್ನು ತಿನ್ನುತ್ತಾ ಮುಂದೆ ಹೋದನು. ಆಗ ಬರ್‍ರನೆ ಗಾಳಿ ಬೀಸ ತೊಡಗಿತು. ಗಾಳಿಗೆ ಗಾಳಿಪಟವೊಂದು ಹರಿದು ಕೆಳಗೆ ಬೀಳತೊಡಗಿತು. ಅದನ್ನು ಗೋಪಿ ನೋಡಿದನು. ಅದನ್ನು  ಹಿಡಿಯಲು ಗೋಪಿ ಓಡಿದನು. ಅದು ಅವನ ಹಿಂದೆ ಬಂದು ಬಿದ್ದಿತು.



ಗೋಪಿ ತಿರುಗಿ ಅದರ ಕಡೆಗೆ ಓಡಿದನು. ಆಗ ಅವನು ತಾನೇ ಎಸೆದ ಸಿಪ್ಪೆಯ ಮೇಲೆ ಕಾಲಿಟ್ಟನು ಸರ‍್ರನೆ ಜಾರಿಬಿದ್ದನು. ಅವನ ತಲೆಗೆ ಪೆಟ್ಟಾಗಿ ರಕ್ತಬಂದಿತು. ''ಅಮ್ಮಾ'', ಎಂದು ಕೂಗಿ ಅಳತೊಡಗಿದನು. ಅಮ್ಮ ಓಡಿ ಬಂದು ಅವನನ್ನು ಹಿಡಿದಳು. ಗೋಪಿ ಕೆಳಗೆ ನೋಡಿದಾಗ ತಾನೇ ಎಸೆದ ಬಾಳೆಹಣ್ಣಿನ ಸಿಪ್ಪೆ ಕಾಣಿಸಿತು. ಅದನ್ನು ನೋಡಿ ಆತನಿಗೆ ತನ್ನ ತಪ್ಪಿನ ಅರಿವಾಯಿತು.



ಅಂದಿನಿಂದ ಗೋಪಿ ಬಾಳೆಹಣ್ಣಿನ ಸಿಪ್ಪೆಯನ್ನು ಕಸದ ತೊಟ್ಟಿಯಲ್ಲೇ ಹಾಕ ತೊಡಗಿದನು. ತನ್ನ ಗೆಳೆಯರಿಗೂ ಈ ವಿಚಾರ ಹೇಳಿದನು.

**ಸೂಚನೆ :** ಮಕ್ಕಳಿಗೆ ಘಟನೆಯನ್ನು ಚೆನ್ನಾಗಿ ವಿವರಿಸಿ ಹೇಳಬೇಕು. ಇದೇ ಘಟನೆ ಮತ್ತೆ ವಿವರಿಸಿ ಹೇಳಲು ಪ್ರೋತ್ಸಾಹಿಸಬೇಕು. ಘಟನೆಯಲ್ಲಿ ಬಂದಿರುವ ಪಾತ್ರಗಳ ಬಗ್ಗೆ ಚರ್ಚೆ ಮಾಡಬೇಕು. ಒಂದು ವೇಳೆ ನೀವು ಗೋಪಿಯ ಸ್ಥಾನದಲ್ಲಿ ಇದ್ದರೆ ಏನು ಮಾಡುತ್ತಿದ್ದಿರಿ?

**ಮಾತನಾಡೋಣ ಬನ್ನಿ.**

1) ನಿಮ್ಮ ಮನೆಯಲ್ಲಿಯ ಕಸ ಎಲ್ಲಿ ಚೆಲ್ಲುವಿರಿ?

2) ಗೋಪಿಯ ಮನೆಯವರು ಹೇಳಿದ ಮಾತು ಕೇಳಿದ್ದರೆ ಏನಾಗುತ್ತಿತ್ತು?

3) ನಿಮ್ಮ ಮನೆಯ ಪರಿಸರವನ್ನು ಯಾರು ಸ್ವಚ್ಛ ಮಾಡುವರು?

**ಕೆಳಗಿನ ಚಿತ್ರಗಳನ್ನು ನೋಡಿ ✓ ಮತ್ತು ✗ ಗುರುತಿಸಿರಿ.**

 ☐

 ☐

 ☐

 ☐

 ☐

 ☐

 ☐

 ☐

❖ **ಮನೆಯ ಮುಂದೆ ಬರುವ ಗಂಟೆ ಗಾಡಿಯಲ್ಲಿ ಕೂಗುವ ಸ್ವಚ್ಛತೆಯ ಘೋಷಣೆ ಹಾಗೂ ಹಾಡುಗಳನ್ನು ಕೇಳಿ ವರ್ಗದಲ್ಲಿ ಹೇಳಿರಿ.**



**ಕೆಳಗೆ ಕೊಟ್ಟ ಪದಗಳನ್ನು ಕ್ರಮವಾಗಿ ಬಿಟ್ಟ ಸ್ಥಳಗಳಲ್ಲಿ ತುಂಬಿ ಕಥೆಯನ್ನು ಪೂರ್ಣ ಮಾಡಿರಿ.**

(ಬೇಟೆಗಾರ, ಕಾಲುಗಳನ್ನು, ಪಾರಿವಾಳ, ಕೂಗಿತು, ಸಹಾಯಕ್ಕೆ, ಬಲೆಗೆ, ಹಾರಿದವು, ಕತ್ತರಿಸಿ)

ಪಾರಿವಾಳಗಳನ್ನು ಬೇಟೆಯಾಡಲು ಒಬ್ಬ ______________ ಬಂದನು. ಬಲೆಯನ್ನು ಹಾಕಿ ಅದರಲ್ಲಿ ______________ ಚೆಲ್ಲಿ ಹೋದನು. ಮುದಿ ______________ ಬಲೆಯಲ್ಲಿ ಬಿದ್ದಿತು. ಅದು ಎಲ್ಲ ಪಾರಿವಾಳಗಳನ್ನು ______________. ಬಲೆಯಿಂದ ಪಾರಾಗಲು ಸಹಾಯ ಕೇಳಿತು. ಇತರ ಸಹಕಾರಿ ಪಾರಿವಾಳಗಳು ______________ ಬಂದವು. ಅವುಗಳು ಸಹ ______________ ಬಿದ್ದವು. ಮುದಿ ಪಾರಿವಾಳದ ಮಾರ್ಗದರ್ಶನದಲ್ಲಿ ಒಗ್ಗಟ್ಟಿನಲ್ಲಿ ಬಲವಿದೆ ಎಂದು ಎಲ್ಲವೂ ಕೂಡಿ ಏಕಕಾಲಕ್ಕೆ ಮೇಲಕ್ಕೆ ______________. ಬಹು ಪ್ರಯತ್ನದಿಂದ ದೂರದವರೆಗೆ ಹಾರುತ್ತಾ ನಿರ್ಜನ ಪ್ರದೇಶದಲ್ಲಿ ಇಳಿದು ಎಲ್ಲಾ ಪಾರಿವಾಳಗಳು ಕೂಡಿ ಕೊಕ್ಕಿನಿಂದ ಬಲೆಯನ್ನು ______________ ಸ್ವಚ್ಛಂದವಾಗಿ ಹಾರಿಹೋದವು.

**ನಾಲಿಗೆ ನುಲಿ**

1) ಕುರುಡು ಕುದುರೆಗೆ ಹುರಿದ ಹುರಿಗಡಲೆ

2) ಜಂಬಗಿ ತೂಕಪ್ಪ, ತುಂಬಿದ ತುಪ್ಪದ ತಂಬಿಗೆ ತಂದಾನ.



**ಸೂಚನೆ :** ಮಕ್ಕಳು ಕಥೆಯನ್ನು ಪೂರ್ಣಮಾಡಲು ಪ್ರೋತ್ಸಾಹಿಸಿರಿ. ಇದೇ ರೀತಿ ಬೇರೆ ಕಥೆಗಳನ್ನು ಪೂರ್ಣಮಾಡಲು ಕೊಡಿರಿ. ಪೂರ್ಣಮಾಡಿದ ಕಥೆಗಳನ್ನು ಮಕ್ಕಳಿಂದ ವರ್ಗದಲ್ಲಿ ಹೇಳಿಸಿಕೊಳ್ಳಿರಿ.

**ಸ್ವಚ್ಛತೆ ಬಾಳಿನ ಕರ್ತವ್ಯ**

# 23. ಸಾಹಸಿ ಬಾಲಕ

ಶಿವಮೊಗ್ಗ ಜಿಲ್ಲೆಯ ರಿಪ್ಪನ್ ಪೇಟೆಯ ಸಮೀಪ ಬಾಳೂರು. ಇದು ಬಾಳೂರಿನ ಸರಕಾರಿ ಪ್ರಾಥಮಿಕ ಶಾಲೆ. ಈ ಶಾಲೆಯಲ್ಲಿ ನಡೆದ ಒಂದು ರೋಚಕ ಘಟನೆ. ಶಾಲೆಯು ಎಂದಿನಂತೆ ಪ್ರಾರಂಭವಾಗಿತ್ತು. ಎರಡನೇ ತರಗತಿಯಲ್ಲಿ ಶಿಕ್ಷಕರು ಬಂದರು. ಎಲ್ಲ ವಿದ್ಯಾರ್ಥಿಗಳು ಶಿಕ್ಷಕರಿಗೆ ನಮಸ್ಕರಿಸಿದರು. ಶಿಕ್ಷಕರು ಎಲ್ಲರ ಹಾಜರಿ ತೆಗೆದುಕೊಂಡು ಪಾಠ ಬೋಧಿಸಲು ಅನುವಾದರು. ವಿದ್ಯಾರ್ಥಿ 'ಭುವನ್' ಬ್ಯಾಗಿನಿಂದ ಪುಸ್ತಕ ತೆಗೆಯುವಾಗ ಅವನ ಬ್ಯಾಗಿನಲ್ಲಿ ಹಾವು ಕಾಣಿಸಿತು. ಭುವನ್ ತಬ್ಬಿಬ್ಬಾಗಿ ಈ ವಿಷಯವನ್ನು ತನ್ನ ಗೆಳೆಯ ಮಣಿಕಂಠನಿಗೆ ಹೇಳಿದನು.



ಆಗ ಗೆಳೆಯ ಮಣಿಕಂಠ ಏನು ಮಾಡಿದನು ಗೊತ್ತೇ? ಆತ ತಕ್ಷಣ ಬ್ಯಾಗಿನ ಜಿಪ್ ಎಳೆದು ಮುಚ್ಚಿದನು. ಆಮೇಲೆ ಬ್ಯಾಗನ್ನು ಶಿಕ್ಷಕರ ಕಡೆಗೆ ತೆಗೆದುಕೊಂಡು ಹೋದನು. ಬ್ಯಾಗನ್ನು ಶಿಕ್ಷಕರ ಮುಂದೆ ಹಿಡಿದು, ''ಈ ಬ್ಯಾಗಿನಲ್ಲಿ ಹಾವು ಇದೆ ಸರ್'' ಎಂದನು. ಶಿಕ್ಷಕರು ತಕ್ಷಣ ಬ್ಯಾಗನ್ನು ಹೊರ ತಂದು ಮೈದಾನದಲ್ಲಿ ಇಟ್ಟರು. ಕೂಡಲೇ ಸರ್ಪಮಿತ್ರರನ್ನು ಶಾಲೆಗೆ ಕರೆಸಿದರು. ಅವರು ಬ್ಯಾಗನ್ನು ತೆಗೆದು ನೋಡಿದಾಗ ಅದರಲ್ಲಿ ನಾಗರಹಾವು ಇತ್ತು. ಅವರು ಅದನ್ನು ಉಪಾಯವಾಗಿ ಹಿಡಿದು ಒಂದು ಚೀಲದಲ್ಲಿ ಹಾಕಿದರು. ಹಾವನ್ನು ಸಮೀಪದ ಕಾಡಿಗೆ ಬಿಟ್ಟು ಅದರ ರಕ್ಷಣೆ ಮಾಡಿದರು. ವಿದ್ಯಾರ್ಥಿ ಮಣಿಕಂಠನ ಸಾಹಸ ಮತ್ತು ಸಮಯ ಪ್ರಜ್ಞೆಯನ್ನು ಎಲ್ಲರೂ ಕೊಂಡಾಡಿದರು.

**ಮಾತನಾಡೋಣ ಬನ್ನಿ.**

1) ಹಾವು ನೋಡಿದ ನಂತರ ಯಾವ ಕಾಳಜಿ ತೆಗೆದುಕೊಳ್ಳಬೇಕು?

2) ಮಣಿಕಂಠನ ಸ್ಥಾನದಲ್ಲಿ ನೀವಿದ್ದರೆ ಏನು ಮಾಡುವಿರಿ?

**ಕೆಳಗಿನ ಶಬ್ದಗಳ ಅರ್ಥವನ್ನು ಶಬ್ದಕೋಶದಲ್ಲಿ ಹುಡುಕಿ ಬರೆ.**

i) ರೋಚಕ –

ii) ತಬ್ಬಿಬ್ಬು –

iii) ಸಮಯಪ್ರಜ್ಞೆ –

**ಒಂದೇ ಶಬ್ದದಲ್ಲಿ ಉತ್ತರ ಬರೆ.**

ಅ) ರಿಪ್ಪನ್ ಪೇಟೆಯ ಸಮೀಪ ಯಾವ ಊರಿತ್ತು?

..................................

ಬ) ಹಾವು ಎಲ್ಲಿ ಕುಳಿತಿತ್ತು?

..................................

ಕ) ಬ್ಯಾಗಿನಲ್ಲಿ ಹಾವು ಇದ್ದದ್ದನ್ನು ಭುವನ್ ಯಾರಿಗೆ ಹೇಳಿದನು?

..................................

ಡ) ಹಾವನ್ನು ಎಲ್ಲಿ ಬಿಟ್ಟರು?

..................................

**ಕಂಸಿನಲ್ಲಿಯ ಶಬ್ದ ತೆಗೆದುಕೊಂಡು ಯೋಗ್ಯ ವಾಕ್ಯ ತಯಾರಿಸಿ ಬರೆ.**

(ಸರಸರ, ತಕ ಥೈ ತಕ ಥೈ, ಮಿಣಿಮಿಣಿ, ಟಣ್ ಟಣ್)

**ಉದಾ:-** ಮೊಲ ಟುಣು ಟುಣು ಜಿಗಿಯುತ್ತದೆ.

ಅ) ನವಿಲು .............. ಕುಣಿಯುತ್ತದೆ.

ಬ) ಹಾವು .............. ಓಡುತ್ತದೆ.

ಕ) ಮಂಗ .............. ಜಿಗಿಯುತ್ತದೆ.

ಡ) ಮಿಂಚುಹುಳ .............. ಮಿಂಚುತ್ತದೆ.

**ಸೂಚನೆ :** ವರ್ತಮಾನಪತ್ರಗಳಲ್ಲಿ ಬಂದ ಈ ರೀತಿಯ ಸುದ್ದಿಗಳನ್ನು ಓದಿರಿ ಮತ್ತು ಸಂಗ್ರಹ ಮಾಡಿರಿ. ಶಿಕ್ಷಕರು ಇಂತಹ ಸುದ್ದಿಯನ್ನು ತೆಗೆದುಕೊಂಡು ಶ್ರುತಲೇಖನ ಮಾಡಿಸಿಕೊಳ್ಳಿರಿ.

**ಶಕ್ತಿಗಿಂತ ಯುಕ್ತಿ ಮೇಲು**



# ಒಂದು ಸುತ್ತು ಗ್ರಂಥಾಲಯದಲ್ಲಿ (ಚಿತ್ರ ಹರಟೆ)

**ಶಿಕ್ಷಕರಿಗೆ ಸೂಚನೆ :-** ಮಕ್ಕಳನ್ನು ಗ್ರಂಥಾಲಯಕ್ಕೆ ಕರೆದುಕೊಂಡು ಹೋಗಿರಿ ಕಥೆ, ವಿವಿಧ ಪುಸ್ತಕಗಳ ಪರಿಚಯ ಮಾಡಿಸಿರಿ.




**ಸೂಚನೆ :** ಮಕ್ಕಳಿಗೆ ಮೇಲಿನ ಚಿತ್ರವನ್ನು ನಿರೀಕ್ಷಣೆ ಮಾಡಲು ಹೇಳಿರಿ. ಚಿತ್ರದ ವರ್ಣನೆಯನ್ನು ಮಾಡಲು ಅವರಿಗೆ ಗ್ರಂಥಾಲಯದ ಹಾಗೂ ಪುಸ್ತಕ ವಾಚನದ ಮಹತ್ವ ಹೇಳಿರಿ. ಅವರನ್ನು ಗ್ರಂಥಾಲಯಕ್ಕೆ ಭೇಟಿ ನೀಡಲು ಕರೆದುಕೊಂಡು ಹೋಗಿರಿ.

❖ ವರ್ಗದಲ್ಲಿ ವಾಚನ ಪೆಟ್ಟಿಗೆಯನ್ನು ಇಟ್ಟು ಅದರಲ್ಲಿಯ ಪುಸ್ತಕಗಳನ್ನು ಓದಲು ಮಕ್ಕಳಿಗೆ ಹೇಳಿರಿ. ಪುಸ್ತಕಗಳನ್ನು ತೆಗೆದುಕೊಳ್ಳುವಾಗ, ಇಡುವಾಗ ತೆಗೆದುಕೊಳ್ಳಬೇಕಾದ ಕಾಳಜಿಯ ಬಗ್ಗೆ ವಿವರಿಸಿರಿ.



ಗ್ರಂಥಾಲಯ ಜ್ಞಾನದ ದೇವಾಲಯ

# ಶಬ್ದಕೋಶ

ಅಪ್ಪ – ತಂದೆ, ಜನಕ, ಪಿತಾ,

ಅರಿತು – ತಿಳಿದು

ಅವಿರತ – ಸತತ

ಆಯತಪ್ಪು – ಜೋಲಿ ಹೋಗು

ಒಗ್ಗಟ್ಟು – ಏಕತೆ, ಒಕ್ಕಟ್ಟು

ಕಂಕುಳ–ಬಗಲು

ಕಂದ – ಮಗು, ಹಸುಳೆ

ಕಮಾನು – ಅರ್ಧ ಚಂದ್ರಾಕಾರ /ವಕ್ರ ರೇಖೆ

ಕಣ್ಣುಸೆಳೆ – ಆಕರ್ಷಿಸು

ಕೆರೆ – ಸರೋವರ

ಕರುಣೆ – ದಯೆ

ಕಿತ್ತು ಹಾಕು – ಕೀಳು

ಗಗನ – ಆಕಾಶ

ಗಮನ – ನೋಡು, ದೃಷ್ಟಿ ಹರಿಸು,

ಗಿರಿ – ಪರ್ವತ

ಗೆಳೆತನ – ಮೈತ್ರಿ, ಮಿತ್ರತ್ವ

ಗೊಂಚಲು – ಗುಂಪು, ಸಮೂಹ, ರಾಶಿ, ಗುಚ್ಚ

ಚದುರು – ಎಲ್ಲೆಡೆ ಹರಡು, ಹೊರಸೂಸು

ಜಗಲಿ – ವೇದಿಕೆ, ವಿಗ್ರಹದ ಪೀಠ

ಜಗ್ಗು – ಎಳೆ

ಜೀವರಾಶಿ – ಮನುಷ್ಯ, ಪ್ರಾಣಿ, ಪಕ್ಷಿಗಳು

ಜೇಬು – ಕಿಸೆ

ಟ್ರಂಕು – ಪೆಟ್ಟಿಗೆ, ಸಂದೂಕು

ತಬ್ಬಿಬ್ಬಾಗು – ಗಾಬರಿಯಾಗು

ದಾಖಲೆ – ಕಾಗದಪತ್ರ

ದ್ರೋಣ – ದೊನ್ನೆ

ದಾಹ – ಬಾಯಾರಿಕೆ

ನಸುಕು – ಬೆಳಗಿನ ಜಾವ

ನಮನ – ನಮಸ್ಕಾರ, ವಂದನೆ.

ನಲಿಯೋಣ – ಕುಣಿಯೋಣ

ನಾಜೂಕು – ಸೂಕ್ಷ್ಮ

ನ್ಯಾರಿ – ಬೆಳಗಿನ ಉಪಹಾರ

ನೆತ್ತಿ – ತಲೆಯ ಮಧ್ಯಭಾಗ, ಮಸ್ತಕ

ನಿಸರ್ಗ – ಪ್ರಕೃತಿ

ಪ್ರವಾಸ – ಪಯಣ

ಪ್ರಜ್ಞೆ – ಅರಿವು, ಎಚ್ಚರಿಕೆ

ಪೋಷಕರು – ಪಾಲಕರು

ಪಂಚಪ್ರಾಣ – ಇಷ್ಟದ ವಸ್ತು

ಬಲೆ – ಜಾಲ

ಬಾನು – ಆಕಾಶ, ಗಗನ, ನಭ, ಆಗಸ

ಬಿತ್ತು – ಮಣ್ಣಿನಲ್ಲಿ ಊರುವುದು.

ಬೆನ್ನುತಟ್ಟು – ಪ್ರೋತ್ಸಾಹಿಸು.

ಬೆನ್ನೆಲುಬು – ಬೆನ್ನುಮೂಳೆ

ಮಕರಂದ – ಹೂವಿನಲ್ಲಿರುವ ರಸ

ಮನಕೆ ತಂಪು – ಮುದನೀಡು

ಮಂಡಿ – ಮಾರುಕಟ್ಟೆ, ಬಜಾರ

ಮಂಡೆ – ತಲೆ

ಮರಮರನೆ ಮರುಗು – ಕನಿಕರಪಡು.

ಮೆಲುಕು – ನೆನಪುಮಾಡಿಕೊಳ್ಳು .

ಮುಗಿಲಿಗೆ ಮೂರೇಗೇಣು – ಅತಿಯಾದ ಆನಂದ

ಮುಂಡಾಸು – ತಲೆಗೆ ಸುತ್ತುವ ವಸ್ತ್ರ, ರುಮಾಲು, ಫೇಟಾ

ಮೋಜು – ವಿನೋದ, ತಮಾಷೆ.

ಮೃಗಾಲಯ – ಪ್ರಾಣಿಗಳು ಇಟ್ಟಿರುವ ಸ್ಥಳ

ರೂಢಿ – ಅಭ್ಯಾಸ

ರೈತ – ಕೃಷಿಕ, ಬೇಸಾಯಗಾರ, ಒಕ್ಕಲಿಗ

ವೃಕ್ಷ – ಮರ

ವಿನಯ – ನಮ್ರತೆ

ವೀಕ್ಷಣೆ – ನೋಡು, ದರ್ಶಿಸು.

ಶುಚಿ – ಸ್ವಚ್ಛತೆ

ಶಿರ – ತಲೆ

ಸಂಕಟ – ಕಷ್ಟ

ಸಂಭ್ರಮ – ಸಂತೋಷ, ಆನಂದ

ಸಾರಥಿ – ವಾಹನ ಚಾಲಕ, ರಥ ನಡೆಸುವವ

ಸುಗಂಧ – ಸುವಾಸನೆ, ಪರಿಮಳ

ಸುಸ್ತು – ಆಯಾಸ, ದಣಿವೆ

ಸೂಡು – ಅಟ್ಟಿ, ಪೆಂಡೆ, ಕಟ್ಟು

ಸೊಗಡು – ಸೌಂದರ್ಯ

ಹಟ್ಟಿ –ದನಗಳನ್ನು ಕಟ್ಟುವ ಸ್ಥಳ

ಹಿರಿಮೆ – ಶ್ರೇಷ್ಠತೆ, ದೊಡ್ಡತನ, ಪ್ರಾಮುಖ್ಯತೆ.

ಹಲ್ಲುಕಿಸಿ – ಹಲ್ಲು ತೋರಿಸಿ ನಗು

ಹೊನ್ನು – ಚಿನ್ನ, ಬಂಗಾರ, ಹೇಮ, ಕನಕ

ಪ್ರಿಯ ಮಕ್ಕಳೇ!

ಯಾರಾದರೂ ನಿಮ್ಮೊಂದಿಗೆ ಅಸಭ್ಯವಾಗಿ ಸ್ಪರ್ಶಿಸುತ್ತಿದ್ದಾರೆ ಎಂಬ ಅನುಭವವಾಗಿದ್ದರೆ, ನೀವೆಂದಿಗೂ ಮೌನವಾಗಿರಬಾರದು. ನೀವು ಈ ಕೆಳಗಿನ ವಿಚಾರಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು:

1. ನಿಮ್ಮನ್ನು ನೀವೇ ದೂಷಿಸಿಕೊಳ್ಳಬೇಡಿ.
2. ನೀವು ನಂಬಿದ ವ್ಯಕ್ತಿಗೆ ತಕ್ಷಣ ಹೇಳಿ.
3. ನೀವು POCSO e-box ಮೂಲಕ ಮಕ್ಕಳ ಹಕ್ಕು ರಕ್ಷಣಾ ರಾಷ್ಟ್ರೀಯ ಆಯೋಗ (NCPCR) ಕ್ಕೆ ಮಾಹಿತಿಯನ್ನು ತಿಳಿಸಬಹುದು.

**ನಿಮ್ಮನ್ನು ಅಸುರಕ್ಷಿತವಾಗಿ ಸ್ಪರ್ಶಿಸಿದಾಗ ನೀವು ಖಿನ್ನತೆ, ಗೊಂದಲ ಮತ್ತು ಸಹಾಯವಿಲ್ಲದಂತೆ ಎಂದು ಭಾವಿಸಬಾರದು. ಆದರೆ ಇದರಲ್ಲಿ ನಿಮ್ಮದೇನು ತಪ್ಪು ಇರುವದಿಲ್ಲ.**




ಈ ಬಟನನ್ನುಒತ್ತಿರಿ

POCSO e-box ಅನ್ನು NCPCR@gov.in ನಲ್ಲಿ ಸಂಪರ್ಕಿಸಬಹುದು.

**ನೀವು 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾದರೆ ಮತ್ತು ನೀವು ತಪ್ಪು ಗ್ರಹಿಕೆಗಳನ್ನು ಮಾಡಿಕ್ಕೊಳುವವರಾಗಿದ್ದರೆ ಅಥವಾ ತೊಂದರೆ ಅನುಭವಿಸುತ್ತಿದ್ದರೆ ಅಥವಾ ಯಾರಾದರೂ ತೊಂದರೆಯಲ್ಲಿ ಇದ್ದಾರೆಂದು ತಿಳಿದರೆ ತಕ್ಷಣ 1098 ಕ್ಕೆ ಕರೆಮಾಡಿ.... ಏಕೆಂದರೆ ಕೆಲವೊಂದು ಕರೆಗಳು ನಿಮ್ಮ ಹಾಗೂ ನಿಮ್ಮ ಸ್ನೇಹಿತರ ಜೀವನವನ್ನೇ ಬದಲಾಯಿಬಹುದು.**

CHILD LINE 1098 NIGHT & DAY

**ಚೈಲ್ಡ್‌ಲೈನ್ ೧೦೯೮ (ಹತ್ತು ಒಂಬತ್ತು ಎಂಟು) ಇದು ಒಂದು ೨೪ ಗಂಟೆ ಟೋಲಫ್ರೀ ರಾಷ್ಟ್ರೀಯ ಅಪತ್ಕಾಲದ ಫೋನ್ ಸೇವೆಯಾಗಿದೆ. ಇಂಡಿಯಾ ಫೌಂಡೇಶನ್‌ನ ಒಂದು ಉಪಕ್ರಮವಾಗಿದ್ದು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಬೆಂಬಲಿತವಾಗಿದೆ.**

नए समाज की ओर
Towards a new dawn

**"ವಿದ್ಯಾರ್ಥಿಗಳಿಗೆ ಯೊಗ್ಯಸ್ಪರ್ಶ - ಅಯೊಗ್ಯಸ್ಪರ್ಶ ಇದರ ಬಗ್ಗೆ ಮಾಹಿತಿ ಕೊಡಿರಿ"**

# राज्यगीत

जय जय महाराष्ट्र माझा, गर्जा महाराष्ट्र माझा
जय जय महाराष्ट्र माझा, गर्जा महाराष्ट्र माझा ।।धृ।।

भिती न आम्हा तुझी मुळी ही गडगडणाऱ्या नभा
अस्मानाच्या सुलतानीला जबाब देती जिभा
सह्याद्रीचा सिंह गर्जतो शिव शंभू राजा
दरी दरीतून नाद गुंजला महाराष्ट्र माझा
जय जय महाराष्ट्र माझा, गर्जा महाराष्ट्र माझा ।।१।।

काळ्या छातीवरी कोरली, अभिमानाची लेणी
पोलादी मनगटे खेळती, खेळ जीवघेणी
दारिद्र्याच्या उन्हात शिजला
निढळाच्या घामाने भिजला
देश गौरवासाठी झिजला
दिल्लीचे ही तख्त राखितो, महाराष्ट्र माझा
जय जय महाराष्ट्र माझा, गर्जा महाराष्ट्र माझा
जय जय महाराष्ट्र माझा ।।२।।

ಮಹಾರಾಷ್ಟ್ರರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - 411004.

बालभारती इयत्ता दुसरी (कन्नड)

₹ 64.00